# ಮೈಸೂರು ವಿಶ್ವವಿದ್ಯಾನಿಲಯ

ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು–5


ಸಂ : ದೈ.ಶಿ.ವಿ./ 200 /2014–2015 ದಿನಾಂಕ : 25ನೇ ಜುಲೈ 2014

ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯ
ಎಲ್ಲಾ ಕಾಲೇಜುಗಳ ಪ್ರಾಂಶುಪಾಲರು/
ಆಡಳಿತಾಧಿಕಾರಿಗಳವರಿಗೆ

ಮಾನ್ಯರೆ,

ವಿಷಯ : ಚೀಫ್ ಜಸ್ಟೀಸ್ ಹೊಂಬೇಗೌಡ ಸ್ಮಾರಕ ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜುಗಳ ಗೋಲ್ಡ್ ಕಪ್ ಫುಟ್‌ಬಾಲ್ ಪಂದ್ಯಾವಳಿ 2014–2015

* * * * * *

ಈ ಸಾಲಿನ ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜುಗಳ ಚೀಫ್ ಜಸ್ಟೀಸ್ ಹೊಂಬೇಗೌಡ ಸ್ಮಾರಕ ಫುಟ್‌ಬಾಲ್ ಪಂದ್ಯಾವಳಿಯ ಪ್ರಾಯೋಜಕತ್ವವನ್ನು ಫಿಸಿಕಲ್ ಎಜುಕೇಷನ್ ಟೀಚರ್ಸ್ ಅಕಾಡೆಮಿ ಟ್ರಸ್ಟ್ (ರಿ.), ಮೈಸೂರು ವಹಿಸಿಕೊಂಡಿರುವುದಕ್ಕೆ ಹಾರ್ದಿಕವಾಗಿ ಅಭಿನಂದಿಸುತ್ತಾ ಸದರಿ ಪಂದ್ಯಾವಳಿಯನ್ನು ದಿನಾಂಕ 16ನೇ ಆಗಸ್ಟ್ 2014 ರಿಂದ 20ನೇ ಆಗಸ್ಟ್ 2014ವರೆಗೆ ನಾಕ್/ಔಟ್–ಕಮ–ಲೀಗ್ ಮಾದರಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಫುಟ್‌ಬಾಲ್ ಮೈದಾನದಲ್ಲಿ ನಡೆಸಲಾಗುವುದು. ಈ ಪಂದ್ಯಾವಳಿಯಲ್ಲಿ ಭಾಗವಹಿಸುವ ತಂಡಗಳು ರೂ. 100–00 ಪ್ರವೇಶಧನದೊಂದಿಗೆ 6ನೇ ಆಗಸ್ಟ್ 2014ರೊಳಗೆ ಕೆಳಗೆ ಸೂಚಿಸಿರುವವರಿಗೆ ಪ್ರವೇಶಗಳನ್ನು ಕಳುಹಿಸಿಕೊಡಬೇಕು. ಒಂದು ಕಾಲೇಜಿನಿಂದ ಒಂದು ತಂಡ ಮಾತ್ರ ಭಾಗವಹಿಸಬಹುದು. ಪ್ರವೇಶಧನದ ಡಿಡಿ : ಚೆಕ್‌ಅನ್ನು ಸಂಚಾಕರು, ಮೈಸೂರು ವಿಶ್ವವಿದ್ಯಾನಿಲಯ ಚಾಮುಂಡಿ ವಲಯ ಪಂದ್ಯಾವಳಿ ಮೈಸೂರು ಇವರ ಹೆಸರಿನಲ್ಲಿ ಪಡೆದು ಪ್ರವೇಶ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಬೇಕು. ಪ್ರವೇಶಗಳನ್ನು ಕಳುಹಿಸಿದ ಎಲ್ಲಾ ತಂಡಗಳು ದಿನಾಂಕ : 16–08–2014ರಂದು ಬೆಳಿಗ್ಗೆ 8–00 ಘಂಟೆಗೆ ವಿಶ್ವವಿದ್ಯಾನಿಲಯ ಫುಟ್‌ಬಾಲ್ ಮೈದಾನದಲ್ಲಿ ಕಾಲೇಜಿನ ಸಮವಸ್ತ್ರ ತೊಟ್ಟು ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲು ಸೂಚಿಸಲಾಗಿದೆ.

ಪ್ರವೇಶಗಳನ್ನು ಡಾ. ಪಿ. ಕೃಷ್ಣಯ್ಯ, ಉಪ ನಿರ್ದೇಶಕರು ಮತ್ತು ಪಂದ್ಯಾವಳಿಯ ಸಂಚಾಲಕರು ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು–5 ಇವರಿಗೆ ಕಳುಹಿಸಿಕೊಡಬೇಕಾಗಿ ವಿನಂತಿ.

ಸದರಿ ಪಂದ್ಯಾವಳಿಯ ಕಾರ್ಯಾಧಿಕಾರಿಯಾಗಿ ಶ್ರೀಮತಿ ಡಾ. ಎಂ. ರಮಣಿ, ದೈಹಿಕ ಶಿಕ್ಷಣ ನಿರ್ದೇಶಕರು, ಮಹಾರಾಣಿ ವಿಜ್ಞಾನ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಇವರು ಕಾರ್ಯ ನಿರ್ವಹಿಸುವರು.

ತಮ್ಮ ವಿಶ್ವಾಸಿ
25/7/14
(ಡಾ. ಸಿ. ಕೃಷ್ಣ)
ನಿರ್ದೇಶಕರು

**ಪ್ರತಿಗಳನ್ನು ವಂದನಾಪೂರ್ವಕವಾಗಿ :**

1. ಶ್ರೀ ಬಿ. ಸದಾಶಿವ ಭಟ್, ಗೌರವ ಕಾರ್ಯದರ್ಶಿ, ಫಿಸಿಕಲ್ ಎಜುಕೇಷನ್ ಟೀಚರ್ಸ್ ಅಕಾಡೆಮಿ ಟ್ರಸ್ಟ್ (ರಿ.), ನಂ. 1387/ಎ, 4ನೇ ಮುಖ್ಯ ರಸ್ತೆ, 10ನೇ ಅಡ್ಡ ರಸ್ತೆ, ವಿವೇಕಾನಂದನಗರ ಮೈಸೂರು–23 ಇವರ ಅವಗಾಹನೆಗಾಗಿ :
2. ಡಾ. ಪಿ. ಕೃಷ್ಣಯ್ಯ, ಉಪ ನಿರ್ದೇಶಕರು ಹಾಗೂ ಸಂಚಾಲಕರು ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಸೂಕ್ತ ಕ್ರಮಕ್ಕಾಗಿ
3. ಶ್ರೀಮತಿ ಡಾ. ಎಂ. ರಮಣಿ, ದೈಹಿಕ ಶಿಕ್ಷಣ ನಿರ್ದೇಶಕರು, ಮಹಾರಾಣಿ ವಿಜ್ಞಾನ ಕಾಲೇಜು, ಮೈಸೂರು ಇವರಿಗೆ ರವಾನಿಸುತ್ತಾ ದಿನಾಂಕ : 11–08–2014ರಂದು ಬೆಳಿಗ್ಗೆ 11–30 ಗಂಟೆಗೆ ಸಂಚಾಲಕರೊಂದಿಗೆ ನಿರ್ದೇಶಕರ ಕೊಠಡಿಯಲ್ಲಿ ತಳುಕು ಹಾಕಲು ಹಾಜರಿರಬೇಕೆಂದು ಕೋರಲಾಗಿದೆ.
4. ಪ್ರಕಟಣೆಯ ಕೃಪೆಗಾಗಿ ನಗರದ ಎಲ್ಲಾ ಪತ್ರಿಕಾ ಸಂಪಾದಕರು : ವರದಿಗಾರರಿಗೆ ಕಳುಹಿಸಲಾಗಿದೆ.

# ಮೈಸೂರು ವಿಶ್ವವಿದ್ಯಾನಿಲಯ

## ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು–5

ಸಂ : ದೈ.ಶಿ.ವಿ./ 202 /2014–2015 ದಿನಾಂಕ : 25ನೇ ಜುಲೈ 2014

ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯ
ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ

ಮಾನ್ಯರೆ,

ವಿಷಯ : ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಪುರುಷರು ಮತ್ತು ಮಹಿಳೆಯರ ಕ್ರಾಸ್‌ಕಂಟ್ರಿ ಸ್ಪರ್ಧೆಗಳು ಹಾಗೂ ವಿಶ್ವವಿದ್ಯಾನಿಲಯ ತಂಡಗಳ ಆಯ್ಕೆ ಸ್ಪರ್ಧೆ 2014–2015

* * * * * *

ಈ ಸಾಲಿನ ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಕ್ರಾಸ್‌ಕಂಟ್ರಿ (ಪು/ಮ) ರೇಸ್‌ಗಳು ಹಾಗೂ ವಿಶ್ವವಿದ್ಯಾನಿಲಯದ ತಂಡಗಳ ಆಯ್ಕೆ ಸ್ಪರ್ಧೆಗಳನ್ನು ಹುಣಸೂರಿನ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಆಶ್ರಯದಲ್ಲಿ ದಿನಾಂಕ 23ನೇ ಆಗಸ್ಟ್ 2014ರಂದು ಬೆಳಿಗ್ಗೆ 6–00 ಘಂಟೆಗೆ ನಡೆಸಲಾಗುವುದು. ಈ ಸ್ಪರ್ಧೆಯಲ್ಲಿ ಭಾಗವಹಿಸುವ ಸ್ಪರ್ಧಿಗಳು ದಿನಾಂಕ 22ನೇ ಆಗಸ್ಟ್ 2014ರಂದು ಸಂಜೆ 4–30ಕ್ಕೆ ಹುಣಸೂರಿನ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ವೈದ್ಯಕೀಯ ತಪಾಸಣೆ ಪ್ರಮಾಣ ಪತ್ರದ ಜೊತೆಯಲ್ಲಿ ಹಾಜರಿರಬೇಕು. ವೈದ್ಯಕೀಯ ತಪಾಸಣೆ ಪ್ರಮಾಣ ಪತ್ರಗಳನ್ನು ಸಲ್ಲಿಸಿದ ಸ್ಪರ್ಧಿಗಳನ್ನು ಮಾತ್ರ ಕ್ರಾಸ್‌ಕಂಟ್ರಿ ಸ್ಪರ್ಧೆಗಳಲ್ಲಿ ಭಾಗವಹಿಸಲು ಅನುಮತಿ ನೀಡಲಾಗುವುದು. ಮೇಲ್ಕಂಡ ಸ್ಪರ್ಧೆಗಳಿಗೆ ಪ್ರವೇಶ ಪತ್ರವನ್ನು ಸ್ವೀಕರಿಸಲು 11ನೇ ಆಗಸ್ಟ್ 2014 ಕಡೆಯ ದಿನಾಂಕವಾಗಿರುತ್ತದೆ. ನಿಗದಿತ ದಿನಾಂಕದೊಳಗೆ ಪ್ರವೇಶ ಪತ್ರಗಳನ್ನು ಶ್ರೀ ಕೆ.ಎಸ್. ಭಾಸ್ಕರ್, ದೈಹಿಕ ಶಿಕ್ಷಣ ನಿರ್ದೇಶಕರು, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಹುಣಸೂರು–572 105 ಇವರಿಗೆ ಕಳುಹಿಸಬೇಕಾಗಿ ವಿನಂತಿ. (ಶ್ರೀ ಕೆ.ಎಸ್. ಭಾಸ್ಕರ್‌ರವರ ಮೊಬೈಲ್ ನಂ : 9902436574 ಮತ್ತು ಕಛೇರಿ ದೂರವಾಣಿ ಸಂಖ್ಯೆ : 08222–251 251)

**<u>ಸ್ಪರ್ಧೆಗೆ ದೂರದ ವಿವರ :</u>**

| | | | |
|---|---|---|---|
| 1. | ಕ್ರಾಸ್‌ಕಂಟ್ರಿ ರೇಸ್ | ಪುರುಷರಿಗೆ | 12. ಕೀಲೋಮೀಟರ್‌ಗಳು |
| 2. | ಕ್ರಾಸ್‌ಕಂಟ್ರಿ ರೇಸ್ | ಮಹಿಳೆಯರಿಗೆ | 6. ಕೀಲೋಮೀಟರ್‌ಗಳು |

ಕ್ರಾಸ್‌ಕಂಟ್ರಿ ಸ್ಪರ್ಧೆಗೆ ಪುರುಷರ ವಿಭಾಗದಲ್ಲಿ ಗರಿಷ್ಟ 9 ಮಂದಿ ತಂಡ ಮತ್ತು ಮಹಿಳಾ ವಿಭಾಗದಲ್ಲಿ ಗರಿಷ್ಟ 6 ಮಂದಿ ತಂಡವನ್ನು ಕಳುಹಿಸಬಹುದು. ತಂಡ ಪ್ರಶಸ್ತಿ ಪಡೆಯಬೇಕಾದರೆ ಪುರುಷರ ವಿಭಾಗದಲ್ಲಿ ಕನಿಷ್ಠ 6 ಮಂದಿ ಮತ್ತು ಮಹಿಳಾ ವಿಭಾಗದಲ್ಲಿ ಕನಿಷ್ಠ 4 ಮಂದಿ ಸ್ಪರ್ಧಿಗಳು ಸ್ಪರ್ಧೆಯನ್ನು ಖಡ್ಡಾಯವಾಗಿ ಮುಕ್ತಾಯಗೊಳಿಸಬೇಕು. ಕಡಿಮೆ ಸಂಖ್ಯೆಯಲ್ಲಿಯೂ ಸಹ ಸ್ಪರ್ಧಿಗಳನ್ನು ಕಳುಹಿಸಬಹುದು.

ಮೇಲ್ಕಂಡ ಸ್ಪರ್ಧೆಗಳಲ್ಲಿ ಭಾಗವಹಿಸಿ ಮೊದಲ ಒಂಭತ್ತು/ಆರು ಸ್ಥಾನಗಳನ್ನು ಪಡೆದವರಿಗೆ ಪ್ರಮಾಣ ಪತ್ರವನ್ನು ನೀಡಲಾಗುವುದು ಮತ್ತು ಮೊದಲ ಮೂರು ಸ್ಥಾನಗಳನ್ನು ಪಡೆದವರಿಗೆ ಪದಕಗಳನ್ನು ಹಾಗೂ ತಂಡ ಪ್ರಶಸ್ತಿ ಪಡೆದವರಿಗೆ ಭಾರತೀನಗರದ ಭಾರತೀ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಎಂ. ಶಿವಲಿಂಗೇಗೌಡರು 2009–2010ನೇ ಸಾಲಿನಲ್ಲಿ ಕೊಡುಗೆಯಾಗಿ ನೀಡಿರುವ ಬೆಳ್ಳಿ ಪರ್ಯಾಯ ಪಾರಿತೋಷಕಗಳನ್ನು ವಿತರಿಸಲಾಗುವುದು.

ದಯಮಾಡಿ ಮೇಲಿನ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಲು ಸಹಕರಿಸಬೇಕಾಗಿ ವಿನಂತಿ.

ವಂದನೆಗಳೊಡನೆ,

ತಮ್ಮ ವಿಶ್ವಾಸಿ
25/7/14
(ಡಾ. ಸಿ. ಕೃಷ್ಣ)
ನಿರ್ದೇಶಕರು

**ವಂದನಾಪೂರ್ವಕವಾಗಿ ಪ್ರತಿಗಳನ್ನು** ಸಂಪಾದಕರು/ವರದಿಗಾರರು,.........................................................ಪತ್ರಿಕೆ, ಮೈಸೂರು ಇವರಿಗೆ ಪ್ರಕಟಣೆಯ ಕೃಪೆಗಾಗಿ ಕಳುಹಿಸಲಾಗಿದೆ.

D/ Sport Time Table- No. 10

# ಮೈಸೂರು ವಿಶ್ವವಿದ್ಯಾನಿಲಯ

## ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು–5

ಸಂ : ದೈ.ಶಿ.ವಿ./ವಿ.ವಿ.ಕ್ರೀ.ಗು.ವ/204/2014–2015 ದಿನಾಂಕ : 25ನೇ ಜುಲೈ 2014

ಗೆ,

ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯ
ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ

*ಮಾನ್ಯರೆ,*

*ವಿಷಯ* : ಐದನೇ ವರ್ಷದ "ಮೈಸೂರು ವಿಶ್ವವಿದ್ಯಾನಿಲಯ ವಿದ್ಯಾರ್ಥಿ ಕ್ರೀಡಾಪಟುಗಳ ಗುಣಮಟ್ಟದ ವರ್ಧನೆ" ಯೋಜನೆಯ ಬಗ್ಗೆ.
*ಉಲ್ಲೇಖ* : ದಿನಾಂಕ : 23–07–2014ರಂದು ನಡೆದ ವಾರ್ಷಿಕ ಪ್ರತಿನಿಧಿಗಳ ಸಭೆಯ ನಿರ್ಣಯ

* * * * * *

ಮೈಸೂರು ವಿಶ್ವವಿದ್ಯಾನಿಲಯದ ಸನ್ಮಾನ್ಯ ಕುಲಪತಿಗಳ ಗಂಭೀರ ಆಲೋಚನೆಯಂತೆ ಕಳೆದ ವರ್ಷಗಳಂತೆಯೇ ಈ ಭಾರಿಯು ನಮ್ಮ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಕ್ರೀಡಾ ಸಾಮರ್ಥ್ಯವನ್ನು ಗುರುತಿಸಿ ಪ್ರೋತ್ಸಾಹಿಸುವ ನಿಟ್ಟಿನಲ್ಲಿ "ವಿಶ್ವವಿದ್ಯಾನಿಲಯ ವಿದ್ಯಾರ್ಥಿ ಕ್ರೀಡಾಪಟುಗಳ ಗುಣಮಟ್ಟದ ವರ್ಧನೆ ಯೋಜನೆ" (Enhancing Standard of Sports Performance Among Students Scheme)ಅನ್ನು ದಿನಾಂಕ 15ನೇ ಸೆಪ್ಟೆಂಬರ್ 2014 ರಿಂದ 14ನೇ ಅಕ್ಟೋಬರ್ 2014ರವರೆಗೆ ಐದು ವಲಯಗಳ 22 ನೋಡಲ್ ಕೇಂದ್ರಗಳಲ್ಲಿ ಪ್ರಾರಂಭಿಸಲಾಗುವುದು. ಈ ಸಾಲಿನಲ್ಲಿ ಸದರಿ ಯೋಜನೆಗೆ ವಿಶ್ವವಿದ್ಯಾನಿಲಯ ಆಯವ್ಯಯದಲ್ಲಿ ಹನ್ನೆರಡು ಲಕ್ಷ ರೂಪಾಯಿಗಳ ಪ್ರತ್ಯೇಕ ಅನುದಾನವನ್ನು ಮಂಜೂರು ಮಾಡಲಾಗಿದೆ ಮತ್ತು ಈ ಯೋಜನೆ ಅನುದಾನದ ಬಳಕೆಯ ಬಗ್ಗೆ ಎಲ್ಲಾ ನೋಡಲ್ ಅಧಿಕಾರಿಗಳು ಮತ್ತು ವಲಯ ಸಂಚಾಲಕರುಗಳ ಜೊತೆ ದಿನಾಂಕ : 23–07–2014ರ ಸಂಜೆ ಚರ್ಚಿಸಿ ಹಲವಾರು ನಿರ್ಣಯಗಳನ್ನು ಕೈಗೊಳ್ಳಲಾಗಿದ್ದು, ಅವುಗಳ ವಿವರವನ್ನು ಈ ಪತ್ರದ ಜೊತೆ ಲಗತ್ತಿಸಲಾಗಿದೆ.

ಮೇಲಿನ ಯೋಜನೆಯ ಕಾರ್ಯಕ್ರಮಕ್ಕೆ ತಮ್ಮೆಲ್ಲರ ಸಹಾಯ, ಸಹಕಾರ ಮತ್ತು ವ್ಯಾಪಕ ಪ್ರಚಾರ ಅತ್ಯವಶ್ಯಕ. ಆದುದರಿಂದ ತಾವು ದಯಮಾಡಿ ಈ ವಿಚಾರವನ್ನು ತಮ್ಮ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರು ಮತ್ತು ವಿದ್ಯಾರ್ಥಿ ಕ್ರೀಡಾಪಟುಗಳ ಗಮನಕ್ಕೆ ತರಬೇಕೆಂದು ವಿನಂತಿಸಿ ಸದರಿ ಯೋಜನೆಯ ಯಶಸ್ಸಿಗೆ ತಮ್ಮ ಸಂಪೂರ್ಣ ಸಹಕಾರ ನೀಡಬೇಕೆಂದು ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ.

ವಂದನೆಗಳೊಡನೆ,

ತಮ್ಮ ವಿಶ್ವಾಸಿ
25/7/14
(ಡಾ. ಸಿ. ಕೃಷ್ಣ)
*ನಿರ್ದೇಶಕರು*

ಅಡಕ : 1) ಸದರಿ ಯೋಜನೆಯ ಬಗ್ಗೆ ನೋಡಲ್ ಸೆಂಟರ್‌ನ ಕಾಲೇಜುಗಳು ಕೈಗೊಳ್ಳಬೇಕಾದ ಕ್ರಮಗಳ ನಿರ್ಣಯದ ಪ್ರತಿ.

**ಪ್ರತಿಗಳನ್ನು ವಂದನಾಪೂರ್ವಕವಾಗಿ :**

1. ಚಾಮುಂಡಿ, ಕೃಷ್ಣರಾಜ, ಚಾಮರಾಜ, ಮಾಂಡವ್ಯ ಮತ್ತು ಮಲೆನಾಡು ವಲಯ ಸಂಚಾಲಕರುಗಳಿಗೆ ಮತ್ತು ಎಲ್ಲಾ ನೋಡಲ್ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ
2. ಸಂಪಾದಕರು/ವರದಿಗಾರರು..............................ಪತ್ರಿಕೆ, ಮೈಸೂರು ಇವರಿಗೆ ಪ್ರಕಟಣೆಯ ಕೃಪೆಗಾಗಿ

# UNIVERSITY OF MYSORE

## Department of Physical Education, Sports Pavilion, Mysore-5

No. DPE/MUCT/ 201 /2014-2015 Date : 25th July. 2014

*To*

The Principals of University
Constituent & Affiliated
Colleges

*Sir/Madam,*

*Sub* : Entry Fee for University Inter- Collegiate Tournaments 2014-2015

* * * * * *

I Write inform you the last date to receive entries for University Inter-Collegiate Zonal Tournaments 2014-2015 is 11th August 2014. The entry fee tariff is as follows:

| **Strength of students** | | **Fee** |
|---|---|---|
| Upto 500 | Rs. | 500-00 |
| Above 500 & upto 1,000 | Rs. | 1,250-00 |
| Above 1,000 & upto 1,500 | Rs. | 2,000-00 |
| Above 1,500 | Rs. | 2,500-00 |

The entry fee has to be sent to the zonal conveners through D.D.only and the Demand Draft to be drawn in favour of Convener, Mysore University Inter-Collegiate Tournaments Chamundi/Malanad/Mandavya/Chamaraja/Krishnaraja Zone. Entries should reach the office of the respective zonal conveners well in advance. No entry will be be accepted without entry fee

The Director of Physical Education, University of Mysore, Mysore has to be informed by the College/Institutions about the students strength and the amount paid towards the Entry Fee alongwith D.D.Number in order to allow the students to take part in the various University teams Selection trials.

The zonal entries to be sent to the following conveners for the year 2014-2015

1. Dr. P. Krishnaiah, Chamundi Zone, Department Physical Education, Sports Pavilion, Mysore-5
2. Sri H.V. Udayakumar, Chamaraja Zone, Physical Director, GFGC, T. Narasipura - 571 124
2. Sri K.S. Bhaskar, Krishnaraja Zone, Physical Director, GFGC for Women, Hunsur - 571 105
3. Kum. P.S.Sandhyarani, Mandavya Zone, Physical Directoress, GFGC, K.R. Pet
4. Sri H. Venkatesh, Malanad Zone, Physical Director, A.N.V. College, Gorur.

***Note*** : 1) Please see overleaf for match charges.

2) Women Section Zonal Games :

| | |
|---|---|
| a) Ballbadminton | d) Badminton (Shuttle) |
| b) Tennikoit | e) Kabaddi |
| c) Throwball | f) Volleyball |

25/7/14

Director

Copy forwarded with best compliments to the respective Conveners for needful action.

# ಮೈಸೂರು ವಿಶ್ವವಿದ್ಯಾನಿಲಯ

## ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು-5

ಸಂ : ದೈ.ಶಿ.ವಿ./ 203 /2014-2015 ದಿನಾಂಕ : 25ನೇ ಜುಲೈ 2014

ಮೈಸೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ ಸಂಯೋಜಿತ ಮತ್ತು ನಿಯೋಜಕ ಕಾಲೇಜುಗಳ 2014-2015ನೇ ಸಾಲಿನ ವಾರ್ಷಿಕ ಪ್ರತಿನಿಧಿಗಳ ಸಭೆಯು ದಿನಾಂಕ : 23-07-2014ರ ಬೆಳಗ್ಗೆ 11-00 ಘಂಟೆಗೆ ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ ಸಭಾಂಗಣದಲ್ಲಿ ಜರುಗಿದ ಸಭೆಯ ನಡಾವಳಿಗಳು :

**<u>ಸಭೆಗೆ ಹಾಜರಿದ್ದ ಸದಸ್ಯರು :</u>**

1. ಡಾ. ಸಿ. ಕೃಷ್ಣ, ನಿರ್ದೇಶಕರು, ಹಾಗೂ ಅಧ್ಯಕ್ಷರು, ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
2. ಶ್ರೀ ಕೆ.ಸಿ. ಕುಮಾರಸ್ವಾಮಿ, ದೈ.ಶಿ.ನಿ. ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಮಂಡ್ಯ.
3. ಶ್ರೀ ಬಿ. ಬಾಲು, ಜಿಮ್ನಾಸ್ಟಿಕ್ಸ್ ತರಬೇತುದಾರರು, ಕರ್ನಾಟಕ ಕ್ರೀಡಾ ಪ್ರಾಧಿಕಾರ, ಮೈಸೂರು.
4. ಶ್ರೀ ಬಿ.ಡಿ. ಕಾಂತರಾಜು, ಪಿ.ಸಿ.ಐ. ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-5
5. ಶ್ರೀ ಸಿ. ಪಳನಿಸ್ವಾಮಿ, ದೈ.ಶಿ.ನಿ. ಜೆ.ಎಸ್.ಎಸ್. ಕಾಲೇಜು, ನಂಜನಗೂಡು.
6. ಶ್ರೀ ಪಶುಪತಿ, ದೈ.ಶಿ.ನಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಿಳಿಕೆರೆ.
7. ಶ್ರೀ ಎಲ್. ಮೋಸೆಸ್, ದೈ.ಶಿ.ನಿ. ಶ್ರೀ ಮಹದೇಶ್ವರ ಪ್ರಥಮ ದರ್ಜೆ ಕಾಲೇಜು, ಕೊಳ್ಳೇಗಾಲ.
8. ಶ್ರೀ ಶಾಂತರಾಜು, ದೈ.ಶಿ.ನಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುದೇರು.
9. ಶ್ರೀ ಎಲ್. ಲೋಹಿತ್, ದೈ.ಶಿ.ನಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿದ್ಧಾರ್ಥನಗರ, ಮೈಸೂರು.
10. ಶ್ರೀ ಟಿ. ಪುಟ್ಟಸ್ವಾಮಿ, ಈಜು ಶಿಕ್ಷಕರು, ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-5
11. ಶ್ರೀ ಎನ್. ಮಲ್ಲುಸ್ವಾಮಿ, ದೈ.ಶಿ.ನಿ. ಜೆ.ಎಸ್.ಎಸ್. ಕಾಲೇಜು, ಗುಂಡ್ಲುಪೇಟೆ.
12. ಶ್ರೀ ಕೆ. ಚಂದ್ರಶೇಖರ್, ದೈ.ಶಿ.ನಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಂಡ್ಲುಪೇಟೆ.
13. ಶ್ರೀ ಮಂಜುನಾಥ ಹೆಗ್ಡೆ, ದೈ.ಶಿ.ನಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಳಂದೂರು.
14. ಕು॥ ಎಂ.ಎಸ್. ಶಿಲ್ಪ, ಯೋಗ ಶಿಕ್ಷಕಿ, ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-5
15. ಶ್ರೀ ಜಯಶಂಕರ್, ದೈ.ಶಿ.ನಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬನ್ನೂರು.
16. ಶ್ರೀ ಪಿ.ಜೆ. ಮಧುಸೂದನ್, ದೈ.ಶಿ.ನಿ. ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು, ಮೈಸೂರು.
17. ಶ್ರೀಮತಿ ಪಿ.ಎಸ್. ಸಂಧ್ಯಾರಾಣಿ, ದೈ.ಶಿ.ನಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್. ಪೇಟೆ.
18. ಶ್ರೀ ಹೆಚ್.ಎನ್. ಚಂದ್ರಶೇಖರ್, ಸಂತ ಜೋಸೆಫ್ ಕಾಲೇಜು, ಮೈಸೂರು.
19. ಶ್ರೀ ಕೆ.ಎಸ್. ಭಾಸ್ಕರ್, ದೈಹಿಕ ಶಿಕ್ಷಣ ನಿರ್ದೇಶಕರು, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಹುಣಸೂರು.
20. ಶ್ರೀ ಆರ್. ನಂಜುಂಡ, ದೈ.ಶಿ.ನಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಿರಿಸಾವೆ.
21. ಶ್ರೀ ಕೃಷ್ಣಪ್ಪ, ದೈಹಿಕ ಶಿಕ್ಷಣ ನಿರ್ದೇಶಕರು, ಸರ್ಕಾರಿ ವಿಜ್ಞಾನ ಕಾಲೇಜು, ಹಾಸನ.
22. ಶ್ರೀ ಹೆಚ್. ವೆಂಕಟೇಶ್, ದೈ.ಶಿ.ನಿ. A.N.V. ಪ್ರಥಮ ದರ್ಜೆ ಕಾಲೇಜು, ಗೊರೂರು.
23. ಶ್ರೀ ವೈಕುಂಠಮೂರ್ತಿ, ದೈ.ಶಿ.ನಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು.
24. ಶ್ರೀ ಎಸ್.ಎನ್. ಮಹದೇವಪ್ಪ, ದೈ.ಶಿ.ನಿ. ವೈ.ಡಿ.ಡಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೇಲೂರು.
25. ಶ್ರೀ ಎಂ. ರಾಮಮೂರ್ತಿ, ದೈ.ಶಿ.ನಿ. ಡಿ. ಬನುಮಯ್ಯ ಕಾಲೇಜು, ಮೈಸೂರು.
26. ಶ್ರೀ ಸದಾಶಿವ ಭಟ್, ದೈ.ಶಿ.ನಿ. ಬಿ. ಸೋಮಾನಿ ಕಾಲೇಜು, ಮೈಸೂರು.
27. ಶ್ರೀ ಅಶೋಕ್ ವೈ. ತುಪಸುಂದರ್, ಹಾಕಿ ತರಬೇತುದಾರರು, ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
28. ಶ್ರೀ ಜಿ.ಪಿ. ಯೋಗೇಶ್, ದೈ.ಶಿ.ನಿ. H.D.D. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಡುವಲಹಿಪ್ಪೆ.
29. ಶ್ರೀ ಬಿ.ಎನ್. ಲಕ್ಷ್ಮೀಶ, ದೈ.ಶಿ.ನಿ. ಬಿ.ಎಂ. ಶೆಟ್ಟಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಣನೂರು.
30. ಶ್ರೀ ಎಸ್. ಮಂಜು, ದೈಹಿಕ ಶಿಕ್ಷಣ ನಿರ್ದೇಶಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಲ್ಲುಹಳ್ಳಿ.
31. ಶ್ರೀ ಎಸ್. ಕಿರಣ್ ರವತ್, ದೈ.ಶಿ.ನಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಳೆನರಸೀಪುರ.
32. ಶ್ರೀ ಎಂ.ಎಸ್. ವೆಂಕಟರಾವ್, ದೈ.ಶಿ.ನಿ. ಜೆ.ಎಸ್.ಎಸ್. ಕಾಲೇಜು, ಊಟಿ ರೋಡ್, ಮೈಸೂರು.
33. ಶ್ರೀ ಡಿ. ಸುರೇಶ್ ಬಾಬು, ದೈ.ಶಿ.ನಿ. ಸರ್ಕಾರಿ ಮಹಿಳಾ ಕಾಲೇಜು, ಮದ್ದೂರು.
34. ಶ್ರೀ ಎಸ್. ಮೋಹನ್, ದೈ.ಶಿ.ನಿ. ಸರ್ಕಾರಿ ಮಹಿಳಾ ಕಾಲೇಜು, ಕೆ.ಆರ್. ನಗರ.
35. ಶ್ರೀ ಎನ್.ಬಿ. ಸುರೇಶ್, ವಾಲಿಬಾಲ್, ತರಬೇತುದಾರರು. (SAI) ದೈ.ಶಿ.ವಿ. ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-5
36. ಶ್ರೀ ಸಿ. ಸಿದ್ದೇಗೌಡ, ದೈ.ಶಿ.ನಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಾಮರಾಜನಗರ.
37. ಡಾ. ಬಿ.ವಿ. ಗಣೇಶ್, ದೈ.ಶಿ.ನಿ. ಶ್ರೀ ಡಿ.ಡಿ.ಅರಸ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು.
38. ಶ್ರೀಮತಿ ಸಿ.ಎಸ್. ಹೇಮಲತಾ, ದೈ.ಶಿ.ನಿ. ಎ.ವಿ.ಕೆ. ಕಾಲೇಜು, ಹಾಸನ.
39. ಶ್ರೀಮತಿ ಕೆ.ಆರ್. ಉಮಾದೇವಿ, ದೈ.ಶಿ.ನಿ. ಜೆ.ಎಸ್.ಎಸ್. ಮಹಿಳಾ ಕಾಲೇಜು, ಕೊಳ್ಳೇಗಾಲ.
40. ಶ್ರೀ ಟಿ. ಆರ್ ಮಹೇಂದ್ರಕುಮಾರ್, ದೈಹಿಕ ಶಿಕ್ಷಣ ನಿರ್ದೇಶಕರು, ಸರ್ಕಾರಿ ಕಲಾ ಕಾಲೇಜು, ಹಾಸನ.
41. ಡಾ. ಎಂ. ರಮಣಿ, ದೈ.ಶಿ.ನಿ. ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು.
42. ಶ್ರೀ ಜಯರಾಮು, ದೈ.ಶಿ.ನಿ. ಶಾಂತಿ ಕಾಲೇಜು, ಮಳವಳ್ಳಿ.
43. ಶ್ರೀ ಎಂ.ಎ. ಪ್ರಕಾಶ್, ದೈ..ಶಿ.ನಿ. ಸರ್ಕಾರಿ ಮಹಿಳಾ ಕಾಲೇಜು, ಹಾಸನ.
44. ಕು॥ ಕೆ. ಜಯಶ್ರೀ, ದೈ.ಶಿ.ನಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕ್ಯಾತನಹಳ್ಳಿ.
45. ಶ್ರೀ ಚಂದ್ರಯ್ಯ, ದೈ.ಶಿ.ನಿ. PES ವಿಜ್ಞಾನ ಕಾಲೇಜು, ಮಂಡ್ಯ.

46. ಶ್ರೀ ಎಂ.ಎಸ್. ಜಯಚಂದ್ರ, ದೈ.ಶಿ.ನಿ. ಸರ್ಕಾರಿ ಗೃಹ ವಿಜ್ಞಾನ ಕಾಲೇಜು, ಹೊಳೆನರಸಿಪುರ.
47. ಶ್ರೀ ಎನ್. ರಮೇಶ್, ದೈ.ಶಿ.ನಿ. ಸರ್ಕಾರಿ ಮಹಾವಿದ್ಯಾಲಯ, ಮಂಡ್ಯ.
48. ಶ್ರೀ ಟಿ.ಬಿ. ಮಾದೇಗೌಡ, ದೈ.ಶಿ.ನಿ. ಸರ್ಕಾರಿ ಮಹಿಳಾ ಪ್ರ.ದರ್ಜೆ ಕಾಲೇಜು, 4ನೇ ಹಂತ, ವಿಜಯನಗರ, ಮೈಸೂರು.
49. ಶ್ರೀ ಎಂ.ಬಿ. ಹುಚ್ಚಗೊಂಡರ್, ದೈ.ಶಿ.ನಿ. ಜೆ.ಎಸ್.ಎಸ್. ಮಹಿಳಾ ಕಾಲೇಜು, ಸರಸ್ವತಿಪುರಂ, ಮೈಸೂರು.
50. ಶ್ರೀ ಎಂ.ಎಸ್. ಪ್ರಕಾಶ್, ದೈ.ಶಿ.ನಿ. ವಿದ್ಯೋದಯ ಪ್ರಥಮ ದರ್ಜೆ ಕಾಲೇಜು, ಟಿ.ನರಸೀಪುರ.
51. ಶ್ರೀ ಆರ್. ರಮೇಶ್, ದೈ.ಶಿ.ನಿ. ಪಿ.ಎಲ್.ಎನ್. ಪ್ರಥಮ ದರ್ಜೆ ಕಾಲೇಜು, ಪುರಿಗಾಲಿ.
52. ಶ್ರೀಮತಿ ಎಂ.ಜಿ. ವನಿತ, ದೈ.ಶಿ.ನಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು.
53. ಶ್ರೀ ಹೆಚ್.ಎಸ್. ಕೃಷ್ಣಕುಮಾರ್, ದೈ.ಶಿ.ನಿ. ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-5
54. ಶ್ರೀ ಎಸ್.ಜೆ. ಪುಟ್ಟರಾಜು, ದೈ.ಶಿ.ನಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆಚ್.ಡಿ. ಕೋಟೆ.
55. ಶ್ರೀ ಎನ್.ಎಸ್. ಸುಬ್ರಮಣ್ಯ, ದೈ.ಶಿ.ನಿ. ಇನ್‌ಸ್ಟ್ಯೂಟ್ ಆಫ್ ಎಜುಕೇಷನ್ (ಬಿ.ಇಡಿ., ಕಾಲೇಜು) ಕುವೆಂಪುನಗರ, ಮೈಸೂರು.
56. ಶ್ರೀ ಜೆ.ಕೆ. ಪವನ್, ದೈ.ಶಿ.ನಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನರಾಯಪಟ್ಟಣ.
57. ಶ್ರೀ ಎಂ.ಆರ್. ಪರಮೇಶ, ದೈ.ಶಿ.ನಿ. ಸಂತ ಫಿಲೋಮಿನಾ ಮಹಿಳಾ ಕಾಲೇಜು, ಹಾಸನ.
58. ಶ್ರೀ ಎಸ್. ಉಮೇಶ್, ದೈಹಿಕ ಶಿಕ್ಷಣ ನಿರ್ದೇಶಕರು, ಜೆ.ಎಸ್.ಎಸ್. ಕಾಲೇಜು, ಚಾಮರಾಜನಗರ.
59. ಶ್ರೀ ಹೆಚ್.ವಿ. ಉದಯಕುಮಾರ್, ದೈ.ಶಿ.ನಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಟಿ. ನರಸೀಪುರ.
60. ಶ್ರೀ ಸಿ. ಪ್ರಕಾಶ್‌ಕುಮಾರ್ ದೈ.ಶಿ.ನಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಉದಯಪುರ.
61. ಶ್ರೀ ಬಾಬು ಪ್ರಸಾದ್, ದೈ.ಶಿ.ನಿ. ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಹೊಳೆನರಸೀಪುರ.
62. ಶ್ರೀ ಎಂ.ವಿ. ಪ್ರಸಾದ್, ದೈ.ಶಿ.ನಿ. ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು.
63. ಶ್ರೀಮತಿ ಪ್ರತಿಮಾ.ಕೆ.ಆರ್. ಸರ್ಕಾರಿ ಪ್ರ.ದ. ಕಾಲೇಜು, ಕೆ.ಆರ್.ನಗರ.
64. ಶ್ರೀ ಕೆ.ವಿ. ನಾಗಭೂಷಣ್, ದೈ.ಶಿ.ನಿ. ಕಾವೇರಿ ಪ್ರ.ದ. ಕಾಲೇಜು, ಕುವೆಂಪುನಗರ, ಮೈಸೂರು.
65. ಶ್ರೀ ಎನ್.ಸಿ. ರಾಜು, ದೈ.ಶಿ.ನಿ. ಸರ್ಕಾರಿ ಬಿಇಡಿ., ಕಾಲೇಜು, ವಸಂತ ಮಹಲ್, ಮೈಸೂರು.
66. ಶ್ರೀ ಎನ್.ಪಿ.ಆರ್. ಕೆಸ್ಕರ್, ದೈ.ಶಿ.ನಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾಂಡವಪುರ.
67. ಶ್ರೀ ಕ್ರಿಷ್ಟೋಫರ್, ದೈ.ಶಿ.ನಿ. ಸಂತ ಫಿಲೋಮಿನಾ ಕಾಲೇಜು, ಬೆಂಗಳೂರು ರಸ್ತೆ, ಮೈಸೂರು.
68. ಶ್ರೀ ಬಿ.ಎಸ್. ನಾಗರಾಜು, ದೈ.ಶಿ.ನಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅರಸೀಕೆರೆ.
69. ಡಾ. ಮನ್ಸೂರ್ ಅಹಮದ್, ಕ್ರಿಕೆಟ್ ತರಬೇತುದಾರರು, ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-5
70. ಶ್ರೀ ಸಿ. ಮಹದೇವಯ್ಯ, ದೈ.ಶಿ.ನಿ. ಸೇವಾ ಪ್ರಥಮ ದರ್ಜೆ ಕಾಲೇಜು, ಚಾಮರಾಜನಗರ.
71. ಶ್ರೀ ಅಂತೋಣಿ ಮೋಸಸ್, ದೈ.ಶಿ.ನಿ. ಟೆರೇಷಿಯನ್ ಕಾಲೇಜು, ಸಿದ್ದಾರ್ಥ ಲೇಔಟ್, ಮೈಸೂರು.
72. ಶ್ರೀ ರಾಘವೇಂದ್ರ, ದೈ.ಶಿ.ನಿ. ಶೇಷಾದ್ರಿಪುರಂ ಕಾಲೇಜು, ಮೈಸೂರು.
73. ಶ್ರೀ ಜಗದೀಶ್, ಮಹಾಜನ ಪಿ.ಜಿ. ಸೆಂಟರ್ ಮೈಸೂರು.
74. ಶ್ರೀ ಹೆಚ್.ವಿ. ಮುರಳಿ ದೈ.ಶಿ.ನಿ. ಎನ್.ಡಿ.ಆರ್.ಕೆ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಾಸನ.
75. ಶ್ರೀ ವಿ. ಶ್ರೀನಿವಾಸ್, ದೈ.ಶಿ.ನಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪ.
76. ಶ್ರೀ ಪಂಚಲಿಂಗೇಗೌಡ, ದೈ.ಶಿ.ನಿ. ಶಂಭುಲಿಂಗೇಶ್ವರ ಬಿ.ಪಿ.ಇಡಿ., ಕಾಲೇಜು, ಪಾಂಡವಪುರ.
77. ಶ್ರೀ ಎಂ.ಕೆ. ಪ್ರಕಾಶ್, ದೈ.ಶಿ.ನಿ. ಶಂಭುಲಿಂಗೇಶ್ವರ ಬಿ.ಇಡಿ., ಕಾಲೇಜು, ಪಾಂಡವಪುರ.
78. ಶ್ರೀ ಎ.ಜೆ. ರಾಮಸ್ವಾಮಿ, ದೈ.ಶಿ.ನಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್. ಸಾಗರ.
79. ಶ್ರೀ ಚನ್ನರಾಜೇ ಅರಸ್, ಆರ್.ಐ.ಎಂ.ಎಸ್.ಇ. ಮೈಸೂರು.
80. ಶ್ರೀ ಎಂ.ಎಸ್. ನಾಗಣ್ಣ, ದೈ.ಶಿ.ನಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅರಕಲಗೂಡು.
81. ಶ್ರೀ ಎಸ್. ನಂದೀಶ್, ಮೈಸೂರು ಇನ್‌ಸ್ಟ್ಯೂಟ್ ಆಫ್ ಆರ್ಟ್ಸ್ & ಕಾಮರ್ಸ್ ಕಾಲೇಜು, ಮೈಸೂರು.
82. ಶ್ರೀ ಸುಭಾಷ್, ದೈ.ಶಿ.ನಿ. ವಿದ್ಯಾವಿಕಾಸ್ ಪ್ರಥಮ ದರ್ಜೆ ಕಾಲೇಜು, ಮೈಸೂರು.
83. ಶ್ರೀ ಎಲ್. ಮಂಜಪ್ಪ, ಕುಸ್ತಿ ತರಬೇತುದಾರರು, ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-5
84. ಶ್ರೀ ಜಿ.ಎಂ. ಶಿವಕುಮಾರ್, ದೈ.ಶಿ.ನಿ. ಎಸ್.ಎಂ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಬ್ಬಳ್ಳಿ.
85. ಶ್ರೀ ಬಿ.ಆರ್. ಜಯಣ್ಣ, ದೈ.ಶಿ.ನಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಿರಿಯಾಪಟ್ಟಣ.
86. ಶ್ರೀ ಆರ್. ರಮೇಶ್, ದೈ.ಶಿ.ನಿ. ಪಿ.ಇ.ಎಸ್. ಕಲಾ ಮತ್ತು ವಾಣಿಜ್ಯ ಕಾಲೇಜು, ಮಂಡ್ಯ.
87. ಶ್ರೀ ಎಂ.ಆರ್. ಗಿರೀಶ, ದೈ.ಶಿ.ನಿ. ಟಿ.ಟಿ.ಎಲ್. ಕಾಲೇಜು, ಮೈಸೂರು.
88. ಶ್ರೀ ಶಂಭುಲಿಂಗಶೆಟ್ಟಿ, ದೈ.ಶಿ.ನಿ. ಜಿ.ಐ.ಎಂ.ಡಿ.ಎಸ್. ಕಾಲೇಜು, ಮೈಸೂರು.
89. ಶ್ರೀ ಕೆ.ಬಿ. ಮಂಜುನಾಥ, ದೈ.ಶಿ.ನಿ. ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು, ಚನ್ನರಾಯಪಟ್ಟಣ.
90. ಶ್ರೀ ಹೆಚ್.ಆರ್. ಗೋಂದರಾಜು, ದೈ.ಶಿ.ನಿ. ಜ್ಞಾನೋದರ ಪ್ರಥಮ ದರ್ಜೆ ಕಾಲೇಜು, ಹುಣಸೂರು.
91. ಶ್ರೀ ಕೆ. ರವಿ. ದೈ.ಶಿ.ನಿ. ಎನ್.ಐ.ಇ. ಪ್ರಥಮ ದರ್ಜೆ ಕಾಲೇಜು, ಮೈಸೂರು.
92. ಶ್ರೀ ಹೆಚ್.ಕೆ. ಪ್ರೇಮಾರ್ಜನ್, ದೈ.ಶಿ.ನಿ. ವಿಶ್ವ ಕವಿ ಕುವೆಂಪು ಪ್ರಥಮ ದರ್ಜೆ ಕಾಲೇಜು, ಮೈಸೂರು.
93. ಶ್ರೀ ಸಿ.ಎಸ್. ಮೋಹನ್‌ಕುಮಾರ್, ದೈ.ಶಿ.ನಿ. ಸರ್ಕಾರಿ ಕಾಲೇಜು (ಸ್ವಾಯತ್ತ) ಮಂಡ್ಯ.
94. ಶ್ರೀಮತಿ ಕೆ. ಸಂಗೀತ, ದೈ.ಶಿ.ನಿ. ಮಹಾರಾಣಿ ಕಲಾ ಮತ್ತು ವಾಣಿಜ್ಯ ಕಾಲೇಜು, ಮೈಸೂರು.
95. ಡಾ. ಸೀನಪ್ಪ, ದೈ.ಶಿ.ನಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಟ್ಟದಪುರ.
96. ಶ್ರೀ ಎಸ್. ವಿಶ್ವನಾಥಯ್ಯ, ದೈ.ಶಿ.ನಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಾಗಮಂಗಲ.
97. ಶ್ರೀ ಎಸ್. ಉಮೇಶ್, ದೈ.ಶಿ.ನಿ. ಜೆ.ಎಸ್.ಎಸ್. ಕಾಲೇಜು, ಚಾಮರಾಜನಗರ.
98. ಶ್ರೀಮತಿ ಜಿ.ಸಿ. ಕೋಮಲಮ್ಮ, ದೈ.ಶಿ.ನಿ. ವಾಣಿವಿಲಾಸ ಅರಸು ಪ್ರಥಮ ದರ್ಜೆ ಕಾಲೇಜು, ಮೈಸೂರು.
99. ಶ್ರೀ ಬಿ.ಎಸ್. ಗಿರೀಶ್, ಬ್ಯಾಸ್ಕೆಟ್‌ಬಾಲ್ ತರಬೇತುದಾರರು, ಡಿ.ವೈ.ಎಸ್.ಎಸ್. ಮೈಸೂರು.
100. ಕು॥ ಗಾಯತ್ರಮ್ಮ, ದೈ.ಶಿ.ನಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್. ಪೇಟೆ.
101. ಶ್ರೀ ಬಿ.ಪಿ. ನಾರಾಯಣ, ದೈ.ಶಿ.ನಿ. ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು, ನಾಗಮಂಗಲ.
102. ಡಾ. ಪಿ. ಕೃಷ್ಣಯ್ಯ, ಉಪ ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-5
103. ಡಾ. ಪುಲಿಕೇಶಿ ವೈ. ಶೆಟ್ಟಿಪ್ಪನವರ್, ಸಹಾಯಕ ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-5

ಪ್ರಸಕ್ತ ಸಾಲಿನಲ್ಲಿ ನಿವೃತ್ತರಾಗಲಿರುವ ಶ್ರೀ ಚಂದ್ರಯ್ಯ ಮತ್ತು ಶ್ರೀ ಎಲ್. ಮಂಜಪ್ಪರವರನ್ನು ನಿರ್ದೇಶಕರಾದ ಡಾ. ಸಿ. ಕೃಷ್ಣರವರು ವೇದಿಕೆ ಅತಿಥಿಗಳಾಗಿ ಆಹ್ವಾನಿಸಿ, ಶ್ರೀಯುತರನ್ನು ಹಾಗೂ ಸಭೆಗೆ ಆಗಮಿಸಿದ್ದ ವಿವಿಧ ಕಾಲೇಜಿನ ಪ್ರತಿನಿಧಿಗಳಿಗೆ ಸ್ವಾಗತವನ್ನು ಕೋರಿದರು.

ಕಳೆದ ಸಾಲಿನಲ್ಲಿ ನಮ್ಮ ಕ್ರೀಡಾ ಚಟುವಟಿಕೆಗಳಿಗೆ ವಲಯ ಸಂಚಾಲಕರಾಗಿ ಕಾರ್ಯ ನಿರ್ವಹಿಸಿದ ಸಂಚಾಲಕರುಗಳು ಹಾಗೂ ಕಾಲೇಜಿನ ಪ್ರಾಂಶುಪಾಲರುಗಳಿಗೆ ವಂದನೆ ಸಲ್ಲಿಸಿದರು ಮತ್ತು ಪುರುಷ/ಮಹಿಳಾ ಕ್ರಾಸ್‌ಕಂಟ್ರಿ ಓಟದ ಸ್ಪರ್ಧೆಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟ ಶ್ರೀ ಹೆಚ್.ಡಿ. ದೇವೇಗೌಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಡವಲಹಿಪ್ಪೆಗೆ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರು, ಸಿಬ್ಬಂದಿ ವರ್ಗ ಮತ್ತು ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಜಿ.ಪಿ. ಯೋಗೇಶ್‌ರವರಿಗೆ ಮತ್ತು ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಅಂತರ ವಲಯ ಮಹಿಳಾ ಕ್ರೀಡಾ ಕೂಟವನ್ನು ನಡೆಸಿಕೊಟ್ಟ ಮಹಾರಾಣಿ ಕಲಾ ಮತ್ತು ವಾಣಿಜ್ಯ ಮಹಿಳಾ ಕಾಲೇಜು, ಮೈಸೂರು ಇದರ ಪ್ರಾಂಶುಪಾಲರು, ಸಿಬ್ಬಂದಿ ವರ್ಗ ಮತ್ತು ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀಮತಿ ಟಿ.ಎಸ್. ಯಶೋಧರವರಿಗೆ ಹಾಗೂ ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಅಂತರ ವಲಯ ಪುರುಷರ ಕ್ರೀಡಾ ಕೂಟವನ್ನು ನಡೆಸಿಕೊಟ್ಟ ಸರ್ಕಾರಿ (ಸ್ವಾಯತ್ತ) ಕಾಲೇಜು, ಮಂಡ್ಯ ಪ್ರಾಂಶುಪಾಲರು, ಸಿಬ್ಬಂದಿ ವರ್ಗ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಎನ್. ರಮೇಶ್‌ರವರಿಗೆ ವಿಭಾಗದ ಪರವಾಗಿ ಧನ್ಯವಾದಗಳನ್ನು ತಿಳಿಸಿದರು ಹಾಗೂ 2013-2014ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯ ಕ್ರೀಡಾ ಚಟುಚಟಿಕೆಗಳನ್ನು ನಡೆಸಿಕೊಟ್ಟ ಎಲ್ಲಾ ವಲಯ ಸಂಚಾಲಕರುಗಳಿಗೆ ಹಾಗೂ ವಿದ್ಯಾರ್ಥಿ ಕ್ರೀಡಾಪಟುಗಳ ಗುಣಮಟ್ಟ ವರ್ಧನೆ ಯೋಜನೆಯ ತರಬೇತಿ ಶಿಬಿರಗಳನ್ನು ನಡೆಸಿಕೊಟ್ಟ ಸಂಬಂಧಿಸಿದ ಕಾಲೇಜುಗಳು ಪ್ರಾಂಶುಪಾಲರುಗಳಿಗೆ, ನೋಡಲ್ ಅಧಿಕಾರಿಗಳಿಗೆ ಮತ್ತು ತರಬೇತುದಾರರುಗಳಿಗೆ ಧನ್ಯವಾದಗಳನ್ನು ಅರ್ಪಿಸಿದರು.

ವಿಶ್ವವಿದ್ಯಾನಿಲಯ ಗುಣಮಟ್ಟ ವರ್ಧನೆ ಯೋಜನೆಗೆ ಈ ಸಾಲಿನಲ್ಲಿ 2 ಲಕ್ಷ ರೂ. ಗಳ ಹೆಚ್ಚುವರಿ ಅನುದಾನ ನೀಡಲಾಗಿದೆ, ಪ್ರಸಕ್ತ ಸಾಲಿನಿಂದ ಮಹಿಳೆಯರ ವಿಶ್ವವಿದ್ಯಾನಿಲಯ ಹ್ಯಾಂಡ್‌ಬಾಲ್ ತಂಡವನ್ನು ಆಯ್ಕೆ ಮಾಡುವ ಸಲುವಾಗಿ ಪರಿಚಯಿಸಲಾಗಿದೆ. ಉಳಿದ ವಿಚಾರಗಳನ್ನು ಮುಂದೆ ಮಂಡಿಸಲಾಗುವುದು.

**ಸಭೆಯ ಕಾರ್ಯಸೂಚಿಯಂತೆ ತೆಗೆದುಕೊಂಡ ತೀರ್ಮಾನಗಳು** :

1. **ಕಾಲೇಜುಗಳ ಸಲಹೆ/ಕೋರಿಗಳ ಬಗ್ಗೆ :**

ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಕೆ.ಆರ್. ನಗರ ಇವರು ದೈಹಿಕ ಶಿಕ್ಷಣ ವಿಷಯದ ಬಗ್ಗೆ ತರಗತಿಗಳನ್ನು ಹಾಗೂ ಕ್ರೀಡಾ ಚಟುವಟಿಕೆಗಳನ್ನು ತಿಳಿಸುವ/ಕಲಿಸುವ ಸಲುವಾಗಿ ವೇಳಾ ಪಟ್ಟಿ ಸಿದ್ಧಪಡಿಸಲು ಮಾರ್ಗದರ್ಶನ ನೀಡುವಂತೆ ಕೋರಿದ್ದ ಮನವಿಯ ಬಗ್ಗೆ ಸಭೆಯ ಗಮನಕ್ಕೆ ತರಲಾಯಿತು.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ದೈಹಿಕ ಶಿಕ್ಷಣ ನಿರ್ದೇಶಕರುಗಳ ಸಲಹೆ ಮತ್ತು ಅಭಿಪ್ರಾಯವನ್ನು ಕೋರಲಾಯಿತು. ಈ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರಿ ಕಲಾ ಕಾಲೇಜು, ಹಾಸನ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಟಿ.ಆರ್. ಮಹೇಂದ್ರಕುಮಾರ್‌ರವರು ಪ್ರಸ್ತುತ ನೀಡಿರುವ ಆದೇಶದಂತೆ ಕರ್ತವ್ಯ ನಿರ್ವಹಿಸಲು ಸಂತೋಷವಾಗುತ್ತದೆ. ಆದರೆ ಪಠ್ಯಕ್ರಮ ನಿಗದಿತ ವೇಳಾ ಪಟ್ಟಿ ಮತ್ತು ಮೂಲಭೂತ ಸೌಕರ್ಯದ ಕೊರತೆಗಳಿದ್ದು ಇದಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಯನ್ನು ನೀಡಿದಲ್ಲಿ ಯಶಸ್ಸು ಕಾಣಲು ಸಾಧ್ಯವೆಂದರು. ಸದರಿ ವಿಷಯದ ಬಗ್ಗೆ ಡಾ. ಬಿ.ವಿ. ಗಣೇಶ್, ಶ್ರೀ ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು ಇವರು ಮಾತಾನಾಡುತ್ತ ತಮ್ಮ ಕಾಲೇಜಿನಲ್ಲಿ ಪ್ರಥಮ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಥಿಯರಿ ಮತ್ತು ಪ್ರಾಕ್ಟಿಕಲ್ ತರಗತಿಗಳನ್ನು ಕಳೆದ ಸಾಲಿನಲ್ಲಿ ಪ್ರಾರಂಭಿಸಿದ್ದು ಹೆಚ್ಚುವರಿ ದೈಹಿಕ ಶಿಕ್ಷಕರ ಅಗತ್ಯವಿರುವ ಕಾರಣ ತರಗತಿಗಳನ್ನು ನಡೆಸಲು ತೊಂದರೆಯಾಗುತ್ತಿದೆ ಎಂದು ಅಭಿಪ್ರಾಯಪಟ್ಟರು. ಮೇಲಿನ ವಿಷಯದ ಬಗ್ಗೆ ಪ್ರಸ್ತಾಪಿಸಿದ ಶ್ರೀ ಕೆ.ಎಸ್. ಭಾಸ್ಕರ್ ಸರ್ಕಾರಿ ಮಹಿಳಾ ಕಾಲೇಜು, ಹುಣಸೂರು ಇವರು ತಮ್ಮ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಥಿಯರಿ ಮತ್ತು ಪ್ರಾಕ್ಟಿಕಲ್ ತರಗತಿಗಳನ್ನು ಪ್ರಾರಂಭಿಸಲಾಗಿದೆ ಎಂದು ತಿಳಿಸಿದರು ಹಾಗೂ ಶ್ರೀ ವೈಕಂಠಮೂರ್ತಿ, ದೈಹಿಕ ಶಿಕ್ಷಣ ನಿರ್ದೇಶಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನಂಜನಗೂಡು ಮತ್ತು ಶ್ರೀ ಮೋಹನ್, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಕೆ.ಆರ್. ನಗರ ಇವರುಗಳು ದೈಹಿಕ ಶಿಕ್ಷಣ ಬೋಧನೆಗೆ ನಿಗದಿತವಾದ ಪಠ್ಯಸೂಚಿ, ವೇಳಾ ಪಟ್ಟಿ ತಯಾರಿಸುವ ಸಂದರ್ಭದಲ್ಲಿ ದೈಹಿಕ ಶಿಕ್ಷಣಕ್ಕೆ ನಿಗದಿತ ಸಮಯವನ್ನು ಸೂಚಿಸುವುದು, ಮತ್ತು ಉನ್ನತಾಧಿಕಾರಿಗಳು ಕಾಲೇಜುಗಳಲ್ಲಿ ಭೇಟಿಕೊಟ್ಟ ಸಮಯದಲ್ಲಿ ಯಾವ ವಿಷಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ವಿಷಯ ತಿಳಿಸುತ್ತೀದ್ದೀರ ಎಂದು ಪ್ರಶ್ನಿಸಿದಲ್ಲಿ ಮುಜುಗರಕ್ಕೆ ಒಳಗಾಗುವ ಸಾಧ್ಯಾತೆ ಇರುವ ಕಾರಣ ಪಠ್ಯ ಸೂಚಿಯ ಅಗತ್ಯವಿದೆ ಎಂದರು. ಡಾ. ಎಂ. ರಮಣಿ, ದೈಹಿಕ ಶಿಕ್ಷಣ ನಿರ್ದೇಶಕರು, ಮಹಾರಾಣಿ ವಿಜ್ಞಾನ ಮಹಿಳಾ ಕಾಲೇಜು ಮೈಸೂರು ಮತ್ತು ಶ್ರೀ ಹೆಚ್.ವಿ. ಉದಯಕುಮಾರ್, ದೈಹಿಕ ಶಿಕ್ಷಣ ನಿರ್ದೇಶಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಟಿ. ನರಸೀಪುರ ಇವರುಗಳು ಪ್ರತಿ ಕಾಲೇಜುಗಳು ತಮ್ಮದೇ ಆದ ಸಮಸ್ಯೆಗಳನ್ನು ಹೊಂದಿದ್ದರು ಸಹ ದೈಹಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಥಿಯರಿ ಮತ್ತು ಪ್ರಾಕ್ಟಿಕಲ್ ತರಗತಿಗಳನ್ನು ತೆಗೆದುಕೊಳ್ಳಲು ಸರ್ಕಾರ ನೀಡಿರುವ ಆದೇಶ ಸ್ವಾಗತರ್ಹ. ಹೆಚ್ಚು

ವರ್ಕ್‌ಲೋಡ್ ಇದ್ದ ಪಕ್ಷದಲ್ಲಿ ಬೆಳಗ್ಗೆ ಅಥವಾ ಸಂಜೆ ಸಮಯದಲ್ಲಿ ವಿಷಯಗಳನ್ನು ಬೋಧಿಸಲು ಅವಕಾಶ ನೀಡಬಹುದಾಗಿದೆ. ಎಂದು ತಿಳಿಸಿದರು. ಶ್ರೀ ಪಶುಪತಿ, ದೈಹಿಕ ಶಿಕ್ಷಣ ನಿರ್ದೇಶಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಿಳಿಕೆರೆ ಇವರು ಸರ್ಕಾರ ನೀಡಿರುವ ಆದೇಶ ಕಾರ್ಯರೂಪಕ್ಕೆ ಬರಬೇಕಾದರೆ ಸರ್ಕಾರವು ಎಲ್ಲಾ ವಿಶ್ವವಿದ್ಯಾನಿಲಯಗಳ ದೈಹಿಕ ಶಿಕ್ಷಣ ನಿರ್ದೇಶಕರಗಳ ಸಭೆಯಲ್ಲಿ ಪಟ್ಟಿ ವಿಷಯ ಮತ್ತು ಪಟ್ಟಿಸೂಚಿಗೆ ಸಂಬಂಧಿಸಿದಂತೆ ವಿಸ್ತೃತ್ತ ಚರ್ಚೆ ನಡೆಸಿ ಸೂಕ್ತ ಮಾರ್ಗಸೂಚಿಗಳನ್ನು ನೀಡುವುದು ಅವಶ್ಯ ಎಂದರು.

ಸದರಿ ವಿಷಯದ ಬಗ್ಗೆ ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ ಇವರು ಮಾತನಾಡುತ್ತ, ಇದು ಸರ್ಕಾರದ ಪಾಲಿಸಿ ವಿಚಾರವಾಗಿದ್ದು ಈ ಸಂಬಂಧ ಪರಿಣಿತರ ಸಮಿತಿಯನ್ನು ರಚಿಸಿ ಹಾಗೂ ರಾಜ್ಯ ಎಲ್ಲಾ ಕಾಲೇಜುಗಳ ದೈಹಿಕ ಶಿಕ್ಷಣ ನಿರ್ದೇಶಕರ ಕಾರ್ಯಾಗಾರ ಏರ್ಪಡಿಸಿ ಸೂಕ್ತ ವರದಿಯನ್ನು ಪಡೆದು ಕ್ರಮ ಜರುಗಿಸಲು ಸರ್ಕಾರವನ್ನು ಕೋರಲಾಗುವುದೆಂದು ಸಭೆಗೆ ತಿಳಿಸಿದರು.

ಫಿಜಿಕಲ್ ಎಜುಕೇಷನ್ ಟೀಚರ್ಸ್ ಅಕಾಡೆಮಿ ಟ್ರಸ್ಟ್ (ರಿ.), ಮೈಸೂರು ಇವರ ಮನವಿಯನ್ನು ಪುರಸ್ಕರಿಸಿ ಈ ಸಾಲಿನಿಂದ ಶಾಶ್ವತವಾಗಿ ಮೈಸೂರು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ನಡೆಸುವ ಚೀಫ್ ಜಸ್ಟೀಸ್ ಹೊಂಬೇಗೌಡ ಸ್ಮಾರಕ ಗೋಲ್ಡ್ ಕಪ್ ಫುಟ್‌ಬಾಲ್ ಪಂದ್ಯಾವಳಿಯ ಪ್ರಯೋಜಕತ್ವವನ್ನು ವಹಿಸಲು ತೀರ್ಮಾನಿಸಲಾಯಿತು.

ಸಭೆಯಲ್ಲಿ ಇತ್ತೀಚಿನ ಕೆಲವು ಕ್ರೀಡೆಗಳ ನಿಯಮಗಳು ಹಾಗೂ ಇತರೆ ವಿಚಾರ ಬಗ್ಗೆ ಈ ಕೆಳಕಂಡ ದೈಹಿಕ ಶಿಕ್ಷಣ ವಿಭಾಗದ ಅಧಿಕಾರಿಗಳು ಪ್ರತಿನಿಧಿಗಳಿಗೆ ಮಾಹಿತಿ ನೀಡಿದರು.

| | | | |
|---|---|---|---|
| 1. | ಶ್ರೀ ಎಲ್. ಮಂಜಪ್ಪ | ಕುಸ್ತಿ ತರಬೇತುದಾರರು | ಕುಸ್ತಿ ನಿಯಮಗಳ ಬಗ್ಗೆ |
| 2. | ಶ್ರೀ ಅಶೋಕ ವೈ. ತುಪಸುಂದರ್ | ಹಾಕಿ ತರಬೇತುದಾರರು | ಹಾಕಿ ನಿಯಮಗಳ ಬಗ್ಗೆ |
| 3. | ಡಾ. ಪಿ. ಕೃಷ್ಣಯ್ಯ | ಉಪ ನಿರ್ದೇಶಕರು | A.I.U. Eligibility ನಿಯಮಗಳ ಬಗ್ಗೆ |
| 4. | ಡಾ. ಎನ್.ಜಿ. ಸುರೇಶ್ | ವಾಲಿಬಾಲ್ ತರಬೇತುದಾರರು | Physical Fitness Tests ಬಗೆಗೆ |
| 5. | ಶ್ರೀ ಬಿ.ಡಿ. ಕಾಂತರಾಜ | ದೈಹಿಕ ಶಿಕ್ಷಣ ಶಿಕ್ಷಕರು | ವಿಭಾಗದ Wabsite ಬಗೆಗೆ |

**2. <u>ವಿವಿಧ ವಲಯ ಸಮಿತಿಗಳ ರಚನೆ</u> :**

| ಸಂಖ್ಯೆ | ವಲಯದ ಹೆಸರು | ಸಂಚಾಲಕರು | ಅಧ್ಯಕ್ಷರು | ಕಾಲೇಜು/ಕಛೇರಿ ವಿಳಾಸ ದೂರವಾಣಿ ಸಂಖ್ಯೆ |
|---|---|---|---|---|
| ಅ. | ಚಾಮುಂಡಿ ವಲಯ | ಡಾ. ಪಿ. ಕೃಷ್ಣಯ್ಯ<br>ಉಪ ನಿರ್ದೇಶಕರು<br>ದೈಹಿಕ ಶಿಕ್ಷಣ<br>ದೈಹಿಕ ಶಿಕ್ಷಣ ವಿಭಾಗ<br>ಮೈಸೂರು ವಿ.ವಿ.ನಿಲಯ<br>ಮೈಸೂರು<br>ಮೊ.ನಂ. 9972045254 | ಡಾ. ಸಿ. ಕೃಷ್ಣ<br>ನಿರ್ದೇಶಕರು<br>ದೈಹಿಕ ಶಿಕ್ಷಣ ವಿಭಾಗ<br>ಮೈಸೂರು ವಿ.ವಿ.ನಿಲಯ<br>ಮೈಸೂರು | ವಿಶ್ವವಿದ್ಯಾನಿಲಯ<br>ದೈಹಿಕ ಶಿಕ್ಷಣ ವಿಭಾಗ<br>ಸ್ಪೋರ್ಟ್ಸ್ ಪೆವಿಲಿಯನ್<br>ಮೈಸೂರು<br>ಕಛೇರಿ : (0821)<br>2419288 |
| ಆ. | ಚಾಮರಾಜ ವಲಯ | ಶ್ರೀ ಹೆಚ್.ವಿ. ಉದಯಕುಮಾರ್<br>ದೈಹಿಕ ಶಿಕ್ಷಣ ನಿರ್ದೇಶಕರು<br>ಸರ್ಕಾರಿ ಪ್ರ.ದ. ಕಾಲೇಜು<br>ಟಿ. ನರಸೀಪುರ-571124<br>ಮೊ.ನಂ. 9481815767 | ಪ್ರೊ. ನಟರಾಜು<br>ಪ್ರ.ದ.ಕಾಲೇಜು<br>ಪ್ರಾಂಶುಪಾಲರು<br>ಸರ್ಕಾರಿ ಪ್ರ.ದ. ಕಾಲೇಜು<br>ಟಿ. ನರಸೀಪುರ | ಸರ್ಕಾರಿ<br>ಪ್ರ.ದ.ಕಾಲೇಜು<br>ಟಿ. ನರಸೀಪುರ<br>ಕಛೇರಿ : (08227)<br>260200 |
| ಇ. | ಮಲೆನಾಡು ವಲಯ | ಶ್ರೀ ಹೆಚ್. ವೆಂಕಟೇಶ್<br>ದೈಹಿಕ ಶಿಕ್ಷಣ ನಿರ್ದೇಶಕರು<br>ಎ.ಎನ್.ವಿ. ಸರ್ಕಾರಿ ಪ್ರ.ದ.<br>ಗೊರೂರು<br>ಮೊ.ನಂ. 9448456254 | ಪ್ರೊ. ಎಂ.ಆರ್. ಚಂದ್ರಶೇಖರ್<br>ಪ್ರಾಂಶುಪಾಲರು<br>ಸರ್ಕಾರಿ ಕಲಾ ಕಾಲೇಜು<br>ಗೊರೂರು | ಸರ್ಕಾರಿ ಕಲಾ<br>ಕಾಲೇಜು, ಗೊರೂರು<br>ಕಛೇರಿ : (08172)<br>225454 |
| ಈ. | ಮಾಂಡವ್ಯ ವಲಯ | ಕು|| ಪಿ.ಎಸ್. ಸಂಧ್ಯಾರಾಣಿ<br>ದೈಹಿಕ ಶಿಕ್ಷಣ ನಿರ್ದೇಶಕರು<br>ಸರ್ಕಾರಿ ಪ್ರ.ದ. ಕಾಲೇಜು<br>ಕೆ.ಆರ್. ಪೇಟೆ-571401<br>ಮೊ.ನಂ. 9964184014 | ಪ್ರೊ. ಹೆಚ್. ಮಹದೇವ<br>ಪ್ರಾಂಶುಪಾಲರು<br>ಸರ್ಕಾರಿ ಪ್ರ.ದ. ಕಾಲೇಜು<br>ಕೆ.ಆರ್. ಪೇಟೆ | ಸರ್ಕಾರಿ ಪ್ರ.ದ.<br>ಕಾಲೇಜು<br>ಕೆ.ಆರ್. ಪೇಟೆ<br>ಕಛೇರಿ : (08230)<br>262322 |
| ಉ. | ಕೃಷ್ಣರಾಜ ವಲಯ | ಶ್ರೀ ಕೆ.ಎಸ್. ಭಾಸ್ಕರ್<br>ದೈಹಿಕ ಶಿಕ್ಷಣ ನಿರ್ದೇಶಕರು<br>ಸರ್ಕಾರಿ ಪ್ರ.ದ. ಕಾಲೇಜು<br>ಹುಣಸೂರು-571105<br>ಮೊ.ನಂ. 9902436574 | ಪ್ರೊ. ಎಂ.ಆರ್. ಸೌಭಾಗ್ಯ<br>ಪ್ರಾಂಶುಪಾಲರು<br>ಸರ್ಕಾರಿ ಪ್ರ.ದ. ಕಾಲೇಜು<br>ಹುಣಸೂರು | ಸರ್ಕಾರಿ ಪ್ರ.ದ.<br>ಕಾಲೇಜು<br>ಹುಣಸೂರು<br>ಕಛೇರಿ : (08222)<br>251251 |

2014–2015ನೇ ಸಾಲಿನ ಕ್ರೀಡಾ ವೇಳಾ ಪಟ್ಟಿ ಮತ್ತು ಈ ಸಾಲಿನಲ್ಲಿ ನಡೆಯುವ ವಿಶ್ವವಿದ್ಯಾನಿಲಯದ ಆಯ್ಕೆ ಸ್ಪರ್ಧೆಗಳು ಹಾಗೂ ಪಂದ್ಯಾವಳಿಗಳ ಬಗ್ಗೆ ಅಧ್ಯಕ್ಷರು ಮಂಡಿಸಿದ ದಿನಾಂಕಗಳನ್ನುಸಭೆಯು ಒಪ್ಪಿತು.

4. ಪ್ರೊ. ಶೇಷಣ್ಣ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ದಿನಾಂಕ : 02–09–2014ರಂದು ನಡೆಸಲಾಗುವುದು ಎಂದು ತಿಳಿಸಿದಾಗ ಸಭೆಯು ಒಪ್ಪಿಗೆ ನೀಡಿತು.

5. ವಿಶ್ವವಿದ್ಯಾನಿಲಯ ವಿದ್ಯಾರ್ಥಿ ಕ್ರೀಡಾಪಟುಗಳ ಗುಣಮಟ್ಟ ವರ್ಧನೆಗೆ ತರಬೇತಿ ಶಿಬಿರಗಳ ಬಗ್ಗೆ ವಿಷಯ ಪ್ರಸ್ತಾಪಿಸುತ್ತಾ ವಿಶ್ವವಿದ್ಯಾನಿಲಯ ಕ್ರೀಡಾ ಸಮಿತಿಯ ಸದಸ್ಯರುಗಳು ಈ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು ಎಂದು ತಿಳಿಸುತ್ತಾ ಕಳೆದ ಸಾಲಿನಲ್ಲಿ ರೂ. ಹತ್ತು ಲಕ್ಷದ ಅನುದಾನ ನೀಡಿದ ವಿಶ್ವವಿದ್ಯಾನಿಲಯದ ಕ್ರೀಡಾ ಸಮಿತಿಗೆ ಅಭಿನಂದನೆ ತಿಳಿಸಿದರು. ಪ್ರಸಕ್ತ ಸಾಲಿನಿಂದ ಈ ಕೆಳಕಂಡ ಐದು ನೋಡಲ್ ಸೆಂಟರಗಳನ್ನು ಬದಲಾವಣೆ ಮಾಡಲಾಗಿದೆ ಎಂದು ಮತ್ತು ಉಳಿದ ಹದಿನೇಳು ನೋಡಲ್ ಸೆಂಟರ್‌ಗಳಲ್ಲಿ ಕಳೆದ ವರ್ಷದಂತೆಯೇ ತರಬೇತಿ ಶಿಬಿರಗಳನ್ನು ನಡೆಸಲಾಗುವುದೆಂದು ವಿವರಿಸಿದರು.

| | | |
|---|---|---|
| 1. ಫುಟ್‌ಬಾಲ್ | : ಮಹಾರಾಣಿ ವಿಜ್ಞಾನ ಮಹಿಳಾ ಕಾಲೇಜು, ಮೈಸೂರು | [ಚಾಮುಂಡಿ ವಲಯ] |
| 2. ಖೋ–ಖೋ | : ಮಹಾರಾಣಿ ಕಲಾ ಮಹಿಳಾ ಕಾಲೇಜು, ಮೈಸೂರು | [ಚಾಮುಂಡಿ ವಲಯ] |
| 3. ಕಬಡ್ಡಿ | : ವೈ.ಡಿ.ಡಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೇಲೂರು | [ಮಲೆನಾಡು ವಲಯ] |
| 4. ಅಥ್ಲೆಟಿಕ್ಸ್ | : ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಮದ್ದೂರು | [ಮಾಂಡವ್ಯ ವಲಯ] |
| 5. ಫುಟ್‌ಬಾಲ್ | : ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಿಳಿಕೆರೆ | [ಕೃಷ್ಣರಾಜ ವಲಯ] |

**ಗುಣಮಟ್ಟ ವರ್ಧನೆ ತರಬೇತಿ ಶಿಬಿರವನ್ನು ದಿನಾಂಕ** : **15–09–2014 ರಿಂದ 14–10–2014ರವರೆಗೆ ಹಮ್ಮಿಕೊಳ್ಳುವುದಾಗಿ ತಿಳಿಸಿದರು.**

6. ಮುಖ್ಯ ಅತಿಥಿಗಳಾಗಿ ಉಪಸ್ಥಿತಿರಿದ್ದ ಮಹನೀಯರುಗಳು ಸಭೆಯ ಮುಂದೆ ತಮ್ಮ ಅನುಭವಗಳನ್ನು ಹಂಚಿಕೊಂಡು ವಿವಿಧ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ದೈಹಿಕ ಶಿಕ್ಷಣ ನಿರ್ದೇಶಕರಾದ ನಾವುಗಳು ವಿದ್ಯಾರ್ಥಿಗಳಿಗೆ ಮಾದರಿಯಾಗಿದ್ದು ಸರಿಯಾದ ಮಾರ್ಗದರ್ಶನ ನೀಡುವುದರ ಮುಖೇನ ನಮ್ಮ ವಿದ್ಯಾರ್ಥಿಗಳು ಕ್ರೀಡಾ ಕ್ಷೇತ್ರದಲ್ಲಿ ಯಶಸ್ವಿಗಳಿಸಲು ಸಾಧ್ಯ ಎಂದು ತಿಳಿಸಿದರಲ್ಲದೆ, ಒಬ್ಬರೇ ನಿರ್ದೇಶಕರು ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರಣ ಎಲ್ಲ ಕ್ರೀಡೆಗಳ ತರಬೇತಿ ನೀಡಲು ತೊಂದರೆಯಾದರೂ ಸಹ ಅಧ್ಯಾಪಕರು/ಅಧ್ಯಾಪಕೇತರರ ಸಹಾಯಸ್ತಾದೊಂದಿಗೆ ಯಶಸ್ಸನ್ನು ಕಾಣಿಸುವಲ್ಲಿ ಸಫಲರಾಗುವುದು ಸಾಧ್ಯವೆಂದು ತಿಳಿಸಿದರು.

**<u>ಅಧ್ಯಕ್ಷರ ನುಡಿ :</u>**

ಡಾ. ಸಿ. ಕೃಷ್ಣರವರು ಅಧ್ಯಕ್ಷೀಯ ನುಡಿ ನುಡಿಯುತ್ತಾ ವಿಶ್ವವಿದ್ಯಾನಿಲಯವು ಇನ್ನು ಎರಡು ವರ್ಷಗಳಲ್ಲಿ ನೂರು ವರ್ಷಗಳನ್ನು ಪೂರೈಸಲಿದ್ದು, ಈ ಸಂದರ್ಭದಲ್ಲಿ ಸನ್ಮಾನ್ಯ ಕುಲಪತಿಗಳಾದ ಪ್ರೊ. ಕೆ.ಎಸ್. ರಂಗಪ್ಪನವರು ವಿಶ್ವವಿದ್ಯಾನಿಲಯದ ಎಲ್ಲಾ ಕ್ರೀಡಾಂಗಣಗಳನ್ನು ಅಂತರರಾಷ್ಟ್ರೀಯ ಗುಣಮಟ್ಟದಲ್ಲಿ ನಿರ್ಮಿಸಲು ಉತ್ಸುಕರಾಗಿದ್ದು, ಅನುದಾನಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸುವರೆಂದು ತಿಳಿಸುತ್ತಾ, ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ರೀಡಾಪಟುಗಳನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಗಳಿಸಲು ಎಲ್ಲಾ ಕಾಲೇಜುಗಳ ದೈಹಿಕ ಶಿಕ್ಷಣ ಅಧ್ಯಾಪಕರುಗಳು ಕಾರ್ಯ ಪ್ರವೃತ್ತರಾಗಬೇಕೆಂದು ಮತ್ತು ಮುಂದೆ ವಿಶ್ವವಿದ್ಯಾನಿಲಯ ಎಲ್ಲಾ ಕ್ರೀಡಾ ಚಟುವಟಿಕೆ ಯಶಸ್ವಿಗೆ ಅತ್ಯಂತ ಕಾಳಜಿಯಿಂದ ಕರ್ತವ್ಯ ನಿರ್ವಹಿಸಬೇಕೆಂದು ವಿನಂತಿಸಿದರು.

7. **<u>ವಂದನಾರ್ಪಣೆ :</u>**
ಅಧ್ಯಕ್ಷರು, ಅತಿಥಿ ಗಣ್ಯರು ಮತ್ತು ಸಭಿಕರನ್ನು ವಿಭಾಗದ ದೈಹಿಕ ಶಿಕ್ಷಣ ಉಪ ನಿರ್ದೇಶಕರಾದ ಡಾ. ಪುಲಿಕೇಶಿ ವೈ. ಶೆಟ್ಟಪ್ಪನವರು ವಂದಿಸುವುದರ ಮೂಲಕ ಸಭೆ ಮುಕ್ತಾಯಗೊಂಡಿತು.

26/9/14
ಅಧ್ಯಕ್ಷರು

**RATES OF UNIVERSITY INTER-COLLEGIATE GAMES MARKING AND OFFICIATING CHARGES PER MATCH FROM 2014-2015**

| Sl. No. | Game | Marking Charges Rs. | Officiating Charges Rs. | Total |
|---|---|---|---|---|
| 1. | BADMINTON ( Shuttle) | 15-00 | 45-00 | 60-00 |
| 2. | BALLBADMINTON | 20-00 | 45-00 | 65-00 |
| 3. | BASKETBALL | 20-00 | 50-00 | 70-00 |
| 4. | CHESS (Per session) | 15-00 | 50-00 | 65-00 |
| 5. | CRICKET | 50-00 | 150-00 | 200-00 |
| 6. | FOOTBALL | 30-00 | 80-00 | 110-00 |
| 7. | HANDBALL | 20-00 | 50-00 | 70-00 |
| 8. | HOCKEY | 30-00 | 75-00 | 105-00 |
| 9. | KABADDI | 20-00 | 50-00 | 70-00 |
| 10. | KHO-KHO | 30-00 | 60-00 | 90-00 |
| 11. | TABLE TENNIS | 15-00 | 45-00 | 60-00 |
| 12. | SOFT BALL | 30-00 | 60-00 | 90-00 |
| 13. | TENNIKOIT | 20-00 | 45-00 | 65-00 |
| 14. | TENNIS | 35-00 | 65-00 | 100-00 |
| 15. | THROWBALL | 20-00 | 50-00 | 70-00 |
| 16. | VOLLEYBALL | 20-00 | 50-00 | 70-00 |

25/7/14

**DIRECTOR**

D/ Sport Time Table- No. 8-9

## ಮೈಸೂರು ವಿಶ್ವವಿದ್ಯಾನಿಲಯ

### ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು–5

ಸಂ : ದೈ.ಶಿ.ವಿ./ 199 /2014–2015 — ದಿನಾಂಕ : 25ನೇ ಜುಲೈ 2014

ಗೆ,

ಪ್ರಾಂಶುಪಾಲರುಗಳು/ಆಡಳಿತಾಧಿಕಾರಿಗಳು
ಮೈಸೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ
ಎಲ್ಲಾ ಕಾಲೇಜುಗಳು

ಮಾನ್ಯರೆ,

*ವಿಷಯ* : ಮೈಸೂರು ವಿಶ್ವವಿದ್ಯಾನಿಲಯದ ಕ್ರೀಡಾ ವೇಳಾ ಪಟ್ಟಿ 2014–2015

* * * * * *

ಈ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಲು ವಿವಿಧ ತಂಡಗಳ ಆಯ್ಕೆ ಸ್ಪರ್ಧೆಗಳು ಮತ್ತು ಪಂದ್ಯಾವಳಿಗಳ ದಿನಾಂಕ ಹಾಗೂ ಸ್ಥಳಗಳನ್ನು 23ನೇ ಜುಲೈ 2014ರಂದು ನಡೆದ ವಿಶ್ವವಿದ್ಯಾನಿಲಯ ವ್ಯಾಪ್ತಿಯ ಎಲ್ಲಾ ಕಾಲೇಜುಗಳ ವಾರ್ಷಿಕ ಪ್ರತಿನಿಧಿಗಳ ಸಭೆಯಲ್ಲಿ ಚರ್ಚಿಸಿ ಅಂತಿಮಗೊಳಿಸಲಾಯಿತು. 2014–2015ನೇ ಸಾಲಿನ ಕ್ರೀಡಾ ವೇಳಾ ಪಟ್ಟಿ ಈ ಕೆಳಕಂಡಂತಿದೆ.

**<u>PROGAMME OF UNIVERSITY OF MYSORE</u>**
**<u>SELECTION TRIALS / COMPETITIONS 2014-2015</u>**

| Sl. No. | Activity | Date of Trials Competitions | Venue | Reporting Time |
|---|---|---|---|---|
| 1. | VOLLEYBALL (M&W) | 16th to 18th Aug. 2014 | Uni. Sp. Pavilion | 8-00 A.M. |
| 2. | TABLE TENNIS (M&W) | 19th & 20th Aug. 2014 | Uni. Gym. Hall | 8-00 A.M. |
| 3. | CROSS COUNTRY (M&W) | 23rd Aug. 2014<br>(Last Date to Receive Entries : 11th Aug. 2014) | Govt.FGCW, Hunsur | 22-8-2014 at 4-30 P.M. along with Medical Certificate |
| 4. | CRICKET (Men) | 25th to 27th Aug. 2014 | Uni. Sp. Pavilion | 8-00 A.M. |
| 5. | a) GYMNASTICS (M&W)<br>b) SWIMMING & DIVING (M&W)<br>c) WRESTLING (M&W)<br>d) YOGA (M&W)<br>e) BEST PHYSIQUE (Men)<br>f) WT. LIFTING (Men) | 1st to 3rd Sept. 2014<br>(Last date to Receive Entries : 18th Aug. 2014) | Uni. Gym. Hall & Uni. Swimming Pool | 8-00 A.M. |
| 6. | FOOTBALL (Men) | 4th to 6th Sept. 2014 | Uni. Sp. Pavilion | 8-00 A.M. |
| 7. | CHESS (M&W Combined) | 8th to 10th Sept. 2014 | Uni. Gym. Corridor | 8-00 A.M. |
| 8. | BASKETBALL (M&W) | 11th to 13th Sept. 2014 | Uni. Sp. Pavilion | 8-00 A.M. |
| 9. | KHO-KHO (M&W) | 15th to 17th Sept. 2014 | Uni. Sp. Pavilion | 8-00 A.M. |
| 10. | HANDBALL (M&W) | 18th to 20th Sept. 2014 | Uni. Sp. Pavilion | 8-00 A.M. |
| 11. | KABADDI (M&W) | 6th to 8th Oct. 2014 | Uni. Sp. Pavilion | 8-00 A.M. |
| 12. | BADMINTON (M&W) | 9th to 11st Oct. 2014 | Uni. Gym. Hall | 8-00 A.M. |
| 13. | ATHLETICS (M&W) | 16th to 18th Oct. 2014<br>(Last Date to Receive Entries : 27th Sept. 2014) | Uni. Oval Grounds | 8-00 A.M. |
| 14. | BALLBADMINTON (M&W) | 20th to 22nd Oct. 2014 | Uni. Sp. Pavilion | 8-00 A.M. |
| 15. | HOCKEY (M&W) | 25th to 27th Oct. 2014 | Uni. Sp. Pavilion | 8-00 A.M. |
| 16. | TENNIS (M&W) | 28th & 29th Oct. 2014 | M.C. Tennis Courts | 8-00 A.M. |

**<u>PROF. SESHANNA ENDOWMENT LECTURE IN PHYSICAL EDUCATION AND SPORTS</u>**

| | |
|---|---|
| **5th Lecture by Prof. Tirumalai Gopalan**<br>**DoS in PE & SS, University of Mysore, Mysore**<br>**on the Topic : Sport and Society** | Venue : BIMS Auditorium, MGM<br>Date : 2nd Sept. 2014<br>Time : 10-30 A.M. |

P.T.O.

**"ENHANCING STANDARD OF SPORTS PERFORMANCE AMONG STUDENTS" SCHEME :**

**Fifth Year Training Programme of various sports Activities at 22 Nodal Centres** | **From 15th Sept. 2014 to 14th Oct. 2014**

**INTER-COLLEGIATE GAMES COMPETITIONS 2014-2015**

| Sl. No. | Tournament | Date | Venue |
|---|---|---|---|
| 1. | Chief Justice Hombegowda Memorial University Inter-Collegiate Gold Cup Football Tournament Sponsored by the Physical Education Teachers' Acamdey Trust (R), Mysore | 16th to 20th Aug. 2014 (Last Date to Receive Entries : 6th Aug. 2014 by the convener, Chamundi Zone, Mysore) | Uni. Sp. Pavilion |
| 2. | Zonal Women Games | To be compeleted before 31st Jan. 2015 | - |
| 3. | Zonal Men Games | To be compeleted before 16th Feb. 2015 | - |
| 4. | Inter-Zonal Women Games | 19th to 21st Feb. 2015 | St. Philomena's College, Mysore |
| 5. | Inter-Zonal Men Games | 12th to 14th March 2015 | P.G. Sports Council MGM |

26/7/14

**DIRECTOR**

D/Sports Time Table 1-2

# ಮೈಸೂರು ವಿಶ್ವವಿದ್ಯಾನಿಲಯ

## ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು-5

ದಿನಾಂಕ : 23-07-2014ರಂದು ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರ ಕಛೇರಿಯಲ್ಲಿ ಸಂಜೆ 5-30ಕ್ಕೆ ನಡೆದ ವಲಯ ಸಂಚಾಲಕರುಗಳು ಮತ್ತು ನೋಡಲ್ ಅಧಿಕಾರಿಗಳ ಸಭೆಯ ನಡಾವಳಿಗಳು :

**<u>ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು :</u>**

| | | |
|---|---|---|
| 1. | ಡಾ. ಸಿ. ಕೃಷ್ಣ, ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು | ಅಧ್ಯಕ್ಷರು |
| 2. | ಡಾ. ಪಿ. ಕೃಷ್ಣಯ್ಯ, ಉಪ ನಿರ್ದೇಶಕರು, ದೈ.ಶಿ.ವಿ. ಮೈ.ವಿ.ವಿ. ಮೈಸೂರು<br>ಚಾಮುಂಡಿ ವಲಯ ಸಂಚಾಲಕರು | ಸದಸ್ಯರು |
| 3. | ಶ್ರೀ ಹೆಚ್.ವೆಂಕಟೇಶ್. ದೈ.ಶಿ.ನಿ. ಎ.ಎಸ್.ವಿ.ಪ್ರ.ದ.ಕಾಲೇಜು, ಗೊರೂರು<br>ಮಲೆನಾಡು ವಲಯ ಸಂಚಾಲಕರು | ಸದಸ್ಯರು |
| 4. | ಕು. ಪಿ.ಎಸ್. ಸಂಧ್ಯಾರಾಣಿ, ದೈ.ಶಿ.ನಿ. ಸ.ಪ್ರ.ದ.ಕಾಲೇಜು. ಕೆ.ಆರ್.ಪೇಟೆ<br>ಮಾಂಡವ್ಯ ವಲಯ ಸಂಚಾಲಕರು | ಸದಸ್ಯರು |
| 5. | ಶ್ರೀ ಹೆಚ್.ವಿ.ಉದಯಕುಮಾರ್, ದೈ.ಶಿ.ನಿ. ಪ್ರ.ದ.ಕಾಲೇಜು. ಟಿ.ನರಸೀಪುರ<br>ಚಾಮರಾಜ ವಲಯ ಸಂಚಾಲಕರು | ಸದಸ್ಯರು |
| 6. | ಶ್ರೀ ಕೆ.ಎಸ್.ಬಾಸ್ಕರ್, ದೈ.ಶಿ.ನಿ. ಸರ್ಕಾರಿ ಮಹಿಳಾ ಕಾಲೇಜು, ಹುಣಸೂರು<br>ಕೃಷ್ಣರಾಜ ವಲಯ ಸಂಚಾಲಕರು | ಸದಸ್ಯರು |
| 7. | ಎಲ್ಲಾ 22 ನೋಡಲ್ ಅಧಿಕಾರಿಗಳು | ಸದಸ್ಯರುಗಳು |

**<u>ಚರ್ಚಿಸಿದ ವಿಷಯ :</u>** "ಐದನೇ ವರ್ಷದ ವಿಶ್ವವಿದ್ಯಾನಿಲಯ ವಿದ್ಯಾರ್ಥಿ ಕ್ರೀಡಾಪಟುಗಳ ಗುಣಮಟ್ಟದ ವರ್ಧನೆ" ಯೋಜನೆ 2014-2015

ಮೇಲಿನ ವಿಷಯದ ಬಗ್ಗೆ ಸವಿವರವಾಗಿ ಚರ್ಚಿಸಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

1) ವಿವಿಧ ವಲಯಗಳಲ್ಲಿ ವಾರ್ಷಿಕ ಪ್ರತಿನಿಧಿಗಳ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಈ ಕೆಳಕಂಡ ನೋಡಲ್ ಸೆಂಟರ್‌ಗಳ ಮುಂದೆ ನಮೂದಿಸಿರುವ ಕ್ರೀಡಾ ಚಟುವಟಿಕೆಗಳಲ್ಲಿ ತರಬೇತಿ ಶಿಬಿರಗಳನ್ನು ನಡೆಸಲು ತೀರ್ಮಾನಿಸಲಾಯಿತು.

| ನೋಡಲ್ ಸೆಂಟರ್ಸ್ (Nodal Centres) | ಚಟುವಟಿಕೆ (Actiivity) | ಅಧಿಕಾರಿ (Nodal Offier) |
|---|---|---|
| I **<u>ಚಾಮುಂಡಿ ವಲಯ :</u>** | | |
| ಅ) ಮಹಾರಾಣಿ ವಿಜ್ಞಾನ ಮಹಿಳಾ ಕಾಲೇಜು, ಮೈಸೂರು | ಫುಟ್‌ಬಾಲ್ | ಡಾ. ಎಂ.ರಮಣಿ |
| ಆ) ಸರ್ಕಾರಿ ಪ್ರ.ದ.ಕಾಲೇಜು, ಸಿದ್ದಾರ್ಥನಗರ | ವಾಲಿಬಾಲ್ | ಶ್ರೀ ಎಲ್.ಲೋಹಿತ್ |
| ಇ) ಮಹಾರಾಣಿ ಕಲಾ ಮತ್ತು ವಾಣಿಜ್ಯ ಮಹಿಳಾ ಕಾಲೇಜು, ಮೈಸೂರು | ಖೋ-ಖೋ | ಶ್ರೀಮತಿ. ಕೆ.ಸಂಗೀತ |
| II **<u>ಮಲೆನಾಡು ವಲಯ :</u>** | | |
| ಅ) ಸರ್ಕಾರಿ ಕಲಾ ಕಾಲೇಜು, ಹಾಸನ | ಖೋ-ಖೋ (ಪು) | ಶ್ರೀ ಟಿ.ಆರ್.ಮಹೇಂದ್ರಕುಮಾರ್ |
| ಆ) ಎ.ವಿ.ಕೆ ಕಾಲೇಜು, ಹಾಸನ | ಖೋ-ಖೋ (ಮ) | ಶ್ರೀಮತಿ. ಹೇಮಲತಾ |
| ಇ) ಎ.ಎಸ್.ವಿ. ಪ್ರ.ದ.ಕಾಲೇಜು, ಗೊರೂರು | ಬಾಲ್‌ಬ್ಯಾಡ್ಮಿಂಟನ್ | ಶ್ರೀ ಹೆಚ್.ವೆಂಕಟೇಶ್ |
| ಈ) ವೈ.ಡಿ.ಡಿ.ಸ.ಪ್ರ.ದ.ಕಾಲೇಜು, ಬೇಲೂರು | ಕಬಡ್ಡಿ | ಶ್ರೀ ಎಸ್.ಎನ್.ಮಹದೇವಪ್ಪ |
| ಉ) ಸರ್ಕಾರಿ ಪ್ರ. ದ ಕಾಲೇಜು, ಚನ್ನರಾಯಪಟ್ಟಣ | ಅಥ್ಲೆಟಿಕ್ಸ್ | ಶ್ರೀ ಜೆ.ಕೆ. ಪವನ್ |
| ಊ) ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಉದಯಪುರ | ವಾಲಿಬಾಲ್ | ಶ್ರೀ ಪ್ರಕಾಶ್‌ಕುಮಾರ್ |
| III **<u>ಮಾಂಡವ್ಯ ವಲಯ :</u>** | | |
| ಅ) ಶಾಂತಿ ಕಾಲೇಜು, ಮಳವಳ್ಳಿ | ಬಾಲ್‌ಬ್ಯಾಡ್ಮಿಮಿಂಟನ್ | ಶ್ರೀ ಜಯರಾಮು |
| ಆ) ಪಿ.ಇ.ಎಸ್. ವಿಜ್ಞಾನ ಕಾಲೇಜು, ಮಂಡ್ಯ | ಹ್ಯಾಂಡ್‌ಬಾಲ್ | ಶ್ರೀ ಚಂದ್ರಯ್ಯ |
| ಇ) ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕ್ಯಾತನಹಳ್ಳಿ | ಖೋ-ಖೋ | ಕುಮಾರಿ ಕೆ. ಜಯಶ್ರೀ |
| ಈ) ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್.ಪೇಟೆ | ವಾಲಿಬಾಲ್ | ಕು. ಪಿ.ಎಸ್. ಸಂಧ್ಯಾರಾಣಿ |
| ಉ) ಸರ್ಕಾರಿ ಮಹಿಳಾ ಪ್ರ.ದ ಕಾಲೇಜು, ಮದ್ದೂರು | ಅಥ್ಲೆಟಿಕ್ಸ್ | ಶ್ರೀ ಡಿ. ಸುರೇಶ್‌ಬಾಬು |

IV **ಚಾಮರಾಜ ವಲಯ :**

| | | |
|---|---|---|
| ಅ) ಶ್ರೀ ಮಹದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಳ್ಳೇಗಾಲ | ಅಥ್ಲೆಟಿಕ್ಸ್ | ಶ್ರೀ ಎಲ್. ಮೋಸೆಸ್ |
| ಆ) ಜೆ.ಎಸ್.ಎಸ್. ಕಾಲೇಜು, ನಂಜನಗೂಡು | ಯೋಗ | ಶ್ರೀ ಸಿ. ಪಳನಿಸ್ವಾಮಿ |
| ಇ) ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನಂಜನಗೂಡು | ಅಥ್ಲೆಟಿಕ್ಸ್ | ಶ್ರೀ ವೈಕುಂಠಮೂರ್ತಿ |
| ಈ) ಸರ್ಕಾರಿ ಪ್ರ.ದ.ಕಾಲೇಜು, ಗುಂಡ್ಲುಪೇಟೆ | ಫುಟ್‌ಬಾಲ್ | ಶ್ರೀ ಕೆ.ಚಂದ್ರಶೇಖರ್ |
| ಉ) ಸರ್ಕಾರಿ ಪ್ರಥಮ ಕಾಲೇಜು, ಟಿ.ಎನ್.ಪುರ | ವಾಲಿಬಾಲ್ | ಶ್ರೀ ಹೆಚ್.ವಿ.ಉದಯಕುಮಾರ್ |

V **ಕೃಷ್ಣರಾಜ ವಲಯ :**

| | | |
|---|---|---|
| ಅ) ಸರ್ಕಾರಿ ಪ್ರ.ದ. ಕಾಲೇಜು, ಕೆ.ಆರ್. ನಗರ | ಬಾಲ್‌ಬ್ಯಾಡ್ಮಿಂಟನ್ | ಶ್ರೀಮತಿ ಕೆ.ಆರ್. ಪ್ರತಿಮಾ |
| ಆ) ಶ್ರೀ ಡಿ.ಡಿ. ಅರಸ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು | ವಾಲಿಬಾಲ್ | ಡಾ. ಬಿ.ವಿ. ಗಣೇಶ್ |
| ಇ) ಸರ್ಕಾರಿ ಪ್ರ.ದ.ಕಾಲೇಜು, ಬಿಳಿಕೆರೆ | ಫುಟ್‌ಬಾಲ್ | ಶ್ರೀ ಪಶುಪತಿ |

2. ದಿನಾಂಕ 15ನೇ ಸೆಪ್ಟೆಂಬರ್ 2014ರಿಂದ ಈ ಯೋಜನೆ ತರಬೇತಿ ಶಿಬಿರಗಳನ್ನು ಪ್ರಾರಂಭಿಸಲು ತೀರ್ಮಾನಿಸಲಾಯಿತು.

3. ಪ್ರತಿ ನೋಡಲ್ ಸೆಂಟರ್‌ನಲ್ಲಿ ಒಟ್ಟು 25 ವಿದ್ಯಾರ್ಥಿಗಳಿಗೆ ಸೀಮಿತಗೊಂಡಂತೆ ಅವಕಾಶ ಕಲ್ಪಿಸಲು ಹಾಗೂ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಲು ತೀರ್ಮಾನಿಸಲಾಯಿತು.

4. ದಿನಾಂಕ : 06-09-2014ರಂದು ಎಲ್ಲಾ ನೋಡಲ್ ಸೆಂಟರ್‌ಗಳಲ್ಲಿ 25 ಶಿಬಿರಾರ್ಥಿಗಳನ್ನು ಆಯ್ಕೆ ಮಾಡಲು ಆಯ್ಕೆ ಸ್ಪರ್ಧೆಯನ್ನು ಏರ್ಪಡಿಸಲು ತೀರ್ಮಾನಿಸಲಾಯಿತು.

5. ಆಯ್ಕೆಯಾದ ಶಿಬಿರಾರ್ಥಿಗಳಿಗೆ ಪ್ರತಿಯೊಬ್ಬರಿಗೆ ಒಂದು ದಿನಕ್ಕೆ ರೂ. 60/-ರಂತೆ 30 ದಿನಗಳಿಗೆ ಪ್ರೋತ್ಸಾಹ ಧನವನ್ನು ಭರಿಸಲು ತೀರ್ಮಾನಿಸಲಾಯಿತು.

6. ವಿಶ್ವವಿದ್ಯಾನಿಲಯ ಮಂಜೂರು ಮಾಡಿರುವ 12 ಲಕ್ಷ ರೂಪಾಯಿಗಳ ಅನುದಾನವನ್ನು ಈ ಕೆಳಕಂಡಂತೆ ಹಂಚಿಕೆ ಮಾಡಲು ತೀರ್ಮಾನಿಸಲಾಯಿತು.

| | |
|---|---|
| 1) ಮಲೆನಾಡು ವಲಯಕ್ಕೆ ತಲಾ | ರೂ. 3,29,600/- |
| 2) ಚಾಮರಾಜ ಮತ್ತು ಮಾಂಡವ್ಯ ವಲಯಕ್ಕೆ ತಲಾ | ರೂ. 2,75,250/- |
| | ಒಟ್ಟು ರೂ. 5,50,500/- |
| 3) ಚಾಮುಂಡಿ ವಲಯಕ್ಕೆ | ರೂ. 1,54,650/- |
| 4) ಕೃಷ್ಣರಾಜ ವಲಯಕ್ಕೆ | ರೂ. 1,65,250/- |

7. ವಿವಿಧ ವಲಯಗಳಿಗೆ ನೀಡುವ ಹಣದಲ್ಲಿ ರೂ. 45,000/-ಗಳನ್ನು ಪ್ರತಿಯೊಂದು ನೋಡಲ್ ಸೆಂಟರ್‌ಗಳ ವೆಚ್ಚಕ್ಕೆ, ಮಲೆನಾಡು/ಮಾಂಡವ್ಯ/ಚಾಮರಾಜ ವಲಯ ಸಂಚಾಲಕರ ನಿರ್ವಹಣಾ ವೆಚ್ಚ ತಲಾ ರೂ.3500/-, ಚಾಮುಂಡಿ ವಲಯ ಸಂಚಾಲಕರಿಗೆ ರೂ. 2,250/- ಮತ್ತು ಕೃಷ್ಣರಾಜ ವಲಯ ಸಂಚಾಲಕರಿಗೆ 2,350/-ರೂ.ಗಳು ಮತ್ತು ಚಾಮುಂಡಿ, ಕೃಷ್ಣರಾಜ ವಲಯ ಸಂಚಾಲಕರಿಗೆ ರೂ.800/ ಹಾಗೂ ಇನ್ನುಳಿದ ಮೂರು ವಲಯಗಳ ಸಂಚಾಲಕರುಗಳಿಗೆ ತಲಾ ರೂ. 850/-ಗಳನ್ನು ಇತರೆ ವೆಚ್ಚಗಳಿಗೆ ಭರಿಸಲು ತೀರ್ಮಾನಿಸಲಾಯಿತು.

8. ಮಲೆನಾಡು/ಮಾಂಡವ್ಯ/ಚಾಮರಾಜ/ಕೃಷ್ಣರಾಜ ವಲಯಗಳ ಪ್ರತಿಯೊಂದು ನೋಡಲ್ ಸೆಂಟರ್‌ಗಳಿಗೆ ನೀಡುವ 53,500/-ರೂ.ಗಳಲ್ಲಿ ಈ ಕೆಳಕಂಡಂತೆ ವೆಚ್ಚ ಮಾಡಲು ತೀರ್ಮಾನಿಸಲಾಯಿತು.

| | | |
|---|---|---|
| ಎ) 25 ಶಿಬಿರಾರ್ಥಿಗಳಿಗೆ 30 ದಿನಕ್ಕೆ ಪ್ರೋತ್ಸಾಹ ಧನ | ರೂ. | 45,000-00 |
| ಬಿ) ತರಬೇತುದಾರರಿಗೆ ಗೌರವಧನ (ಗರಿಷ್ಠ) | ರೂ. | 2,000-00 |
| ಸಿ) ಮೈದಾನದ ನಿರ್ವಹಣೆ ಮತ್ತು ಮಾರ್ಕಿಂಗ್ ಪೌಡರ್ | ರೂ. | 6,500-00 |
| ಒಟ್ಟು | ರೂ. | 53,500-00 |

9. ಚಾಮುಂಡಿ ವಲಯದ ಪ್ರತಿಯೊಂದು ನೋಡಲ್ ಸೆಂಟರ್‌ಗಳಿಗೆ ನೀಡುವ 50,000/- ರೂಗಳಲ್ಲಿ ಈ ಕೆಳಕಂಡಂತೆ ವೆಚ್ಚ ಮಾಡಲು ತೀರ್ಮಾನಿಸಲಾಯಿತು.

| | | |
|---|---|---|
| ಎ) 25 ಶಿಬಿರಾರ್ಥಿಗಳಿಗೆ 30 ದಿನಕ್ಕೆ ಪ್ರೋತ್ಸಾಹ ಧನ | ರೂ. | 45,000-00 |
| ಬಿ) ತರಬೇತುದಾರರಿಗೆ ಗೌರವಧನ (ಗರಿಷ್ಠ) | ರೂ. | 2,000-00 |
| ಸಿ) ಮೈದಾನದ ನಿರ್ವಹಣೆ ಮತ್ತು ಮಾರ್ಕಿಂಗ್ ಪೌಡರ್ | ರೂ. | 3,000-00 |
| ಒಟ್ಟು | ರೂ. | 50,000-00 |

10. ಪ್ರತಿಯೊಂದು ನೋಡಲ್ ಸೆಂಟರ್‌ಗಳ ಮುಖಾಂತರ ಸುತ್ತ ಮುತ್ತಲಿನ ಕಾಲೇಜುಗಳಿಗೆ ಸದರಿ ಯೋಜನೆಯ ಬಗ್ಗೆ ಮುಂಚಿತವಾಗಿ ವ್ಯಾಪಕ ಪ್ರಚಾರ ನೀಡಿ ಶಿಬಿರಾರ್ಥಿಗಳನ್ನು ಆಯ್ಕೆ ಪ್ರಕ್ರಿಯೆ ಮೂಲಕ ಆರಿಸಿ, ಆಯ್ಕೆಯಾದ ಶಿಬಿರಾರ್ಥಿಗಳ ಪಟ್ಟಿಯನ್ನು ಸಂಬಂಧಿಸಿದ ನೋಡಲ್ ಸೆಂಟರ್‌ಗಳ ಕಾಲೇಜುಗಳ ಕ್ರೀಡಾ ಸಮಿತಿಯಲ್ಲಿ ಅನುಮೋದಿಸಿ ನಂತರ ತರಬೇತಿ ಶಿಬಿರವನ್ನು ಪ್ರಾರಂಭಿಸಲು ತೀರ್ಮಾನಿಸಲಾಯಿತು.

11. ಖರ್ಚು ವೆಚ್ಚದ ನಿರ್ವಹಣೆಯನ್ನು ಆಯಾಯ ವಲಯ ಸಂಚಾಲಕರುಗಳು ನಿರ್ವಹಿಸುವಂತೆ ಮತ್ತು ವಿವಿಧ ನೋಡಲ್ ಅಧಿಕಾರಿಗಳಿಗೆ ನಿಗದಿ ಪಡಿಸಿದ ಹಣವನ್ನು ವಿತರಿಸುವ ಹಾಗೂ ಲೆಕ್ಕ ಪತ್ರದ ಅಧಿಕೃತ ವಿವರಗಳನ್ನು (Relevent Vouchers) ಪಡೆದು ತರಬೇತಿ ಶಿಬಿರ ಮುಗಿದ ತಕ್ಷಣ ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಇವರಿಗೆ ವಲಯ ಸಂಚಾಲಕರುಗಳು ನೀಡುವಂತೆ ತೀರ್ಮಾನಿಸಲಾಯಿತು.

12. ನೋಡಲ್ ಸೆಂಟರ್‌ಗಳ ಎಲ್ಲಾ ಅಧಿಕಾರಿಗಳು ತರಬೇತಿ ಶಿಬಿರ ಮುಗಿದ ತಕ್ಷಣ ಶಿಬಿರದ ಬಗ್ಗೆ ಸಂಪೂರ್ಣ ವರದಿಯನ್ನು ಲೆಕ್ಕ ಪತ್ರದ ಜೊತೆ ಮಂಡಿಸುವಂತೆ ತೀರ್ಮಾನಿಸಲಾಯಿತು.

13. ನೋಡಲ್ ಅಧಿಕಾರಿಗಳು ತರಬೇತಿ ಶಿಬಿರದಲ್ಲಿ ಪಾಲ್ಗೊಂಡ ಅರ್ಹ ಪ್ರತಿಭಾನ್ವಿತ ಕ್ರೀಡಾಪಟುಗಳನ್ನು (Highly Talented Sportpersons) ಗುರುತಿಸಿ, ಅಂತಹ ಕ್ರೀಡಾಪಟುಗಳು ಇಚ್ಛೆಪಟ್ಟಲ್ಲಿ ಅವರುಗಳ ಸಾಮರ್ಥ್ಯ ಅಭಿವೃದ್ಧಿ ಪಡಿಸಿಕೊಳ್ಳಲು ಉನ್ನತ ತರಬೇತಿ ಮತ್ತು ವ್ಯಾಸಂಗದ ಸಮಗ್ರ ಹೊಣೆಯ ಸಹಿತ ವಿಶ್ವವಿದ್ಯಾನಿಲಯದ ಕೇಂದ್ರ ಸ್ಥಾನದಲ್ಲಿ ಅವಕಾಶಕಲ್ಪಿಸಿಕೊಡುವಂತೆ ಕೋರಿ ಅಭ್ಯರ್ಥಿಗಳ ಗುಣಮಟ್ಟದ ಪಟ್ಟಿಯೊಡನೆ (Performance Chart) ಅವರುಗಳ ಹೆಸರುಗಳನ್ನು ಶಿಫಾರಸ್ಸು ಮಾಡುವಂತೆ ತೀರ್ಮಾನಿಸಲಾಯಿತು.

14. ವಲಯ ಸಂಚಾಲಕರುಗಳು ದಿನಾಂಕ 23ನೇ ಅಕ್ಟೋಬರ್ 2014ರೊಳಗೆ ನೋಡಲ್ ಅಧಿಕಾರಿಗಳ ಸಭೆಯನ್ನು ಕರೆದು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗದಿಂದ ಲೆಕ್ಕ ಪತ್ರ ಮಂಡನೆಯ ಬಗ್ಗೆ ಮಾಹಿತಿಯನ್ನು ಪಡೆದು, ಅದರಂತೆ ಕ್ರಮ ಜರುಗಿಸುವಂತೆ ಸೂಚಿಸಲು ತೀರ್ಮಾನಿಸಲಾಯಿತು.

ನಿರ್ದೇಶಕರು

UPC-No.119 to 121